ನೇಸರು

ತಿಂಗಳೋಲೆ

₹ 5/-

PAGES 20

DECEMBER 2023 | Nesaru Tingalole | Vol. XLI - 12

HEROS OF UTTARAKASHI

ಮೈಸೂರು ಅಸೋಸಿಯೇಷನ್ ಮುಂಬೈ
THE MYSORE ASSOCIATION, BOMBAY
393, Bhau Daji Road, Matunga, Mumbai - 400 019. | Tel.: 2403 7065
Email : mysoreassociation.mumbai@gmail.com

ಅಸೋಸಿಯೇಷನ್‌ನಲ್ಲಿ ಕನಕ ಜಯಂತಿ ನಿಮಿತ್ತ ಸಂಗೀತ ಕಾರ್ಯಕ್ರಮ

ಇದೇ ನವೆಂಬರ್ 25ರಂದು ಮುಂಬಯಿನ ಮೈಸೂರು ಅಸೋಸಿಯೇಷನ್‌ನಲ್ಲಿ ಕನಕ ಜಯಂತಿಯನ್ನು ಆಚರಿಸಲಾಯಿತು. ಕಾರ್ಯಕ್ರಮ ಶ್ರೀಮತಿ ಶ್ಯಾಮಲಾ ರಾಧೇಶ್ ಅವರ ಸ್ವಾಗತ ಗೀತೆಯೊಂದಿಗೆ ಆರಂಭವಾಯ್ತು. ನಂತರ ಕನಕದಾಸರ ಚಿತ್ರಪಟಕ್ಕೆ ಹಾರ ಹಾಕಿ ದೀಪ ಪ್ರಜ್ವಲನೆಯನ್ನು ಅಸೋಸಿಯೇಷನ್ ಹಿರಿಯ ಸದಸ್ಯರಾದ ಡಾ. ಮಂಜುನಾಥ್ ಮತ್ತು ಶ್ರೀ. ಮಂಜುನಾಥಯ್ಯನವರೂ ಹಾಗೂ ಅಸೋಸಿಯೇಷನನ್ನಿನ ಕಾರ್ಯದರ್ಶಿಗಳಾದ ಡಾ. ಗಣಪತಿ ಶಂಕರಲಿಂಗ್, ಜೊತೆ ಕಾರ್ಯದರ್ಶಿ ಶ್ರೀ ನಾರಾಯಣ ನವಿಲೇಕರ್ ಮಾಡಿ ಕಾರ್ಯಕ್ರಮದ ಆರಂಭಕ್ಕೆ ಚಾಲನೆ ಕೊಟ್ಟರು.

(ಪುಟ 15ರಲ್ಲಿ ಮುಂದುವರೆಯುವುದು.....)

ನೇಸರು ತಿಂಗಳೋಲೆ

ಸಂಪುಟ - 41 ಡಿಸೆಂಬರ್- 2023 ಸಂಚಿಕೆ-12

ಆತ್ಮತೃಪ್ತಿ

✍ **ಡಾ. ಜ್ಯೋತಿ ಸತೀಶ್**

'ಆಸೆಯೇ ದುಃಖಕ್ಕೆ ಮೂಲ' ಅಂತ ಗೊತ್ತಿದ್ದರೂ ಮನುಷ್ಯನ ಆಸೆಗೆ ಇತಿಮಿತಿಗಳಿಲ್ಲ. ಅವನ ತೃಪ್ತಿ ಮತ್ತು ನಿರೀಕ್ಷೆಗಳ ನಡುವೆ ಗೆರೆಯನ್ನು ಎಳೆಯಲು ಸಾಧ್ಯವಿಲ್ಲ. ಏಕೆಂದರೆ ಅವನ ನಿರೀಕ್ಷೆಗಳಿಗೆ ಕಡಿವಾಣ ಅನ್ನೋದು ಇಲ್ಲವೇ ಇಲ್ಲ. ಎಷ್ಟಿದ್ದರೂ ಇನ್ನೂ ಬೇಕು ಅನ್ನೋದನ್ನು ಬಿಡುವುದಿಲ್ಲ. ಮನುಷ್ಯನಿಗೆ ತನ್ನ ಒಬ್ಬನ ಜೀವನದ ಚಿಂತೆಯ ಜೊತೆಗೆ, ತನ್ನ ಮರಿಮಕ್ಕಳ ಚಿಂತೆಯನ್ನೂ ಹೊತ್ತುಕೊಂಡು ನಡೆದಾಡುತ್ತಿರುತ್ತಾನೆ. ಎಲ್ಲರ ಭವಿಷ್ಯವನ್ನು ಗಟ್ಟಿ ಮಾಡುವುದು ಅವನ ಉದ್ದೇಶ. ಅದೇ ಪ್ರಾಣಿಗಳನ್ನು ನೋಡಿ, ಎಷ್ಟೊಂದು ಆರಾಮದಾಯಕ ಜೀವನ ಅವುಗಳದ್ದು. ಇವತ್ತು ಆಹಾರ ಸಿಕ್ಕಿದರೆ ಅಷ್ಟೇ ಅವುಗಳ ಖುಷಿ. ನಾಳೆಯ ಚಿಂತೆ ಅವುಗಳಿಗಿಲ್ಲ. ಆದರೆ ನಮ್ಮಲ್ಲಿ ಆತ್ಮತೃಪ್ತಿ ಅನ್ನೋದೇ ಇಲ್ಲ. ಅವನು ಒಂದು ರೀತಿಯ ಅತೃಪ್ತ ಆತ್ಮ. ಇವತ್ತು ಮಾನವೀಯತೆ ಎಲ್ಲೋ ಮರೆಯಾಗಿದೆ. ಹಣ, ಅಂತಸ್ತಿನ ಮುಂದೆ, ವ್ಯಕ್ತಿಯ ನಿಜವಾದ ವ್ಯಕ್ತಿತ್ವವನ್ನು ಯಾರೂ ಗುರುತಿಸುವುದಿಲ್ಲ. ಹಿರಿಯರ ಅನುಭವದ ಪಾಠವನ್ನು ನಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಳ್ಳಬೇಕು. ಹಿರಿಯರು ಹೇಳುವ ಮಾತುಗಳನ್ನು ಶ್ರದ್ಧೆಯಿಂದ ಕೇಳುವಂತರಾಗಬೇಕು. ಇವತ್ತಿನ ಮಕ್ಕಳಿಗೆ ಅದನ್ನು ಕೇಳುವ ವ್ಯವದಾನವೂ ಇಲ್ಲ. ಅವರಿಗೆ ಅದು ಪುರಾಣವೆನಿಸುತ್ತದೆ.

ನಮಗೆ ಸಿಕ್ಕಿರೋದು ಒಂದು ಬದುಕು. ಅದನ್ನು ಒಳ್ಳೆ ರೀತಿಯಲ್ಲಿ ಅನುಭವಿಸಬೇಕು ನಿಜ. ಆದರೆ ಅದಕ್ಕಾಗಿ ಯಾವಾಗಲೂ ಹಣದ ಹಿಂದೆನೇ ಓಡುವುದು ಸರಿಯಲ್ಲ. ನಾಳಿನ ಸಂತಸಕ್ಕಾಗಿ ಇವತ್ತಿನ ದಿನವನ್ನು ಹಾಳು ಮಾಡಿಕೊಳ್ಳುವುದು ಸಮಂಜಸವಲ್ಲ. ಕತ್ತಲನ್ನೂ ಬೆಳಕಾಗಿಸಿಕೊಳ್ಳುವ ಭರವಸೆಯೊಂದಿಗೆ ಬದುಕನ್ನು ಸಾಗಿಸಬೇಕು. ಇನ್ನು ಯಾವ ಯಾವ ಕಾಲಕ್ಕೆ ಏನೇನು ಆಗಬೇಕು, ಹಾಗೆ ಆದರೇನೆ ಚಂದ. ನಮ್ಮಲ್ಲಿ ಒಂದು ಗಾದೆ ಮಾತಿದೆ. "ಹಲ್ಲಿರುವಾಗ ಕಡಲೆ ಇಲ್ಲ, ಕಡಲೆ ಇರುವಾಗ ಹಲ್ಲಿಲ್ಲ" ಅಂತ. ಅದಕ್ಕೆ ಹಿರಿಯರು ಹೇಳಿದ್ದಲ್ಲವೇ. 'ಎಲ್ಲವೂ ಕಾಲಕ್ಕೆ ಸರಿಯಾಗಿ ನಡೆದರೆನೇ ಚಂದ' ಅಂತ. ಕರಿಯರ್ ಎಲ್ಲ ಸೆಟ್ಲ್ ಆದ ಮೇಲೇನೆ, ಮದುವೆಯಾಗೋಣವೆಂದರೆ, ಆಗ ವಯಸ್ಸಿನ ಅಡ್ಡಿ ಕಾಡುತ್ತದೆ. ಕಾಲ ಯಾರಿಗೂ ಕಾಯೋದಿಲ್ಲ ಅಲ್ಲವೇ? ಹೀಗೆ ನಮ್ಮ ಇಡೀ ಜೀವನ ಚಿಂತೆಯಲ್ಲೇ ಕಳೆದುಹೋಗುತ್ತದೆ. ಈ ಸಂದರ್ಭದಲ್ಲಿ ಗೋಪಾಲ ಕೃಷ್ಣ ಅಡಿಗರ ಕವನದ ಸಾಲುಗಳು ನೆನಪಾಗುತ್ತದೆ. 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ'. ಎಂಥಹ ಅದ್ಭುತವಾದ ಮಾತು! ನಮ್ಮ ಹತ್ತಿರ ಯಾವುದಿದೆಯೋ ಅದಕ್ಕೆ ನಾವು ತೃಪ್ತರಾಗುವುದಿಲ್ಲ. ಯಾವುದಿಲ್ಲವೋ ಅದರ ಬಗ್ಗೇನೇ ಸದಾ ಯೋಚಿಸುತ್ತಿರುತ್ತೇವೆ, ದುಃಖಿತರಾಗುತ್ತೇವೆ. ಹೀಗಾಗಿ ನೆಮ್ಮದಿ ಅನ್ನೋದು ನಮ್ಮಿಂದ ಕೊಸೋ ದೂರ ಸರಿಯುತ್ತಿರುತ್ತದೆ. ಬುದ್ದನೂ ಕೂಡ ಅದೇ ಹೇಳಿದ್ದು. "ಅತಿಯಾದ ಯೋಚನೆಯಿಂದ ಯಾವ ಕೆಲಸವೂ ಆಗುವುದಿಲ್ಲ, ಬದಲಾಗಿ ಅದು ನಿಮ್ಮ ಸಂತೋಷವನ್ನು ಸಾಯಿಸುತ್ತದೆ". ನಮ್ಮ ಕೈಗೆಟುಕದ ಆಸೆಯ ಹಿಂದೆ ಓಡುವುದಕ್ಕಿಂದ, ನಮ್ಮ ಪಾಲಿಗೆ ಬಂದಿರುವುದರಲ್ಲೇ ಖುಷಿ ಪಡಬೇಕು. ಜೀವನದ ಪ್ರತಿಯೊಂದು ಕ್ಷಣಗಳನ್ನು ಸಂತಸದಿಂದ ಅನುಭವಿಸಬೇಕು.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.
****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

ಪಯಣಿಗರು

(ಉಮಾ ರಾವ್ ಕಥೆಗಳು)



✍ **ಉಮಾ ರಾವ್**

ಶಿಕಾಗೋ ಓ ಹೇರ್ ಏರ್‌ಪೋರ್ಟಿನ ಐಷಾರಾಮಿ ಹಾಲಿನಲ್ಲಿದ್ದ ನಾನು ಆತಂಕವಾದಿಯಲ್ಲವೆಂದು ರುಜವಾತುಪಡಿಸುವ ಎಲ್ಲ ರಗಳೆ ಮುಗಿಸಿ ಲಾಂಜಿನಲ್ಲಿ ಕೂತಾಗಲು ತಲೆಯಲ್ಲಿ ಗಿರಕಿ ಹೊಡೆಯುತ್ತಿದ್ದುದು ಮಾತ್ರ ಅದೇ ಮಾತುಗಳು.

ಅವಳನ್ನು ಒಪ್ಪಿಸುವ ಜವಾಬ್ದಾರಿ ನಿನ್ನದು. ಈಗಲೇ ಹೋಗಿ ಒಂದಷ್ಟು ದಿನವಿದ್ದು ಬಾ ಮೀನಾ. ಫೋನಿನಲ್ಲಿ ಗಂಟೆಗಟ್ಟಲೆ ಮಾತಾಡಿ ಪ್ರಯೋಜನವಾಗಲಿಲ್ಲ.

ಎದುರಿಗೆ ಹೋದರೆ ಅದರ ಥರವೇ ಬೇರೆ. ಅದು ಅವಳಿಗೆ ಯಾವಾಗಲೂ ಅಪ್ಪನಿಗಿಂತ ಅಮ್ಮನ ಕಂಡರೆ ಹೆಚ್ಚು ಅಟ್ಯಾಚ್ ಮೆಂಟ್. ನಿನ್ನ ಮಾತು ಕೇಳ್ತಾಳೆ.....

ನಾನಂದುಕೊಂಡಿದ್ದಂತೆ ಆಯ್ತು. ರಕ್ಷಾ ಒಪ್ಪಲಿಲ್ಲ.

ರಕ್ಷಾ, ನಿಧಾನವಾಗಿ ಯೋಚನೆ ಮಾಡು, ನಿನ್ನ ನಿರ್ಧಾರ ಸರಿ ಇಲ್ಲ. ಮದುವೆಗೆ ಮೊದಲೇ ಅವನ ಜೊತೆ ಬದುಕುವುದು, ಆರು ತಿಂಗಳು, ವರ್ಷವೋ ಖಂಡಿತ ಸರಿಯಲ್ಲ.

ಮದುವೆಯಾಗಿ ಬದುಕೆಲ್ಲ ಒಟ್ಟಿಗೆ ಕಳೆಯುವ ನಿರ್ಧಾರ ಮಾಡುವ ಮೊದಲು, ಒಂದು ವರ್ಷ ಜೊತೆಗಿದ್ದು ನೋಡಿದರೆ ತಪ್ಪೇನು?

ಒಂದು ವರ್ಷದಲ್ಲಿ ಏನು ಗೊತ್ತಾಗುತ್ತೆ...

ಯಾಕಾಗೂಲ್ಲ.

ಮದುವೆಗೆ ಮೊದಲು ಎಲ್ಲಾ ಲವರ್ಸ್ ಒಂದೇ ರೀತಿ ಇರ್ತಾರೆ. ಮೆಚ್ಚಿಸುವ, ಒಪ್ಪಿಸುವ ತವಕದಲ್ಲಿ ತಮ್ಮ ಅವಗುಣಗಳನ್ನು ಕಷ್ಟಪಟ್ಟು ಮುಚ್ಚಿಡುತ್ತಾರೆ. ದೇ ವಿಲ್ ಪ್ರೆಸೆಂಟ್ ದ ಬೆಸ್ಟ್ ಆಫ್ ದೆಮ್ ಸೆಲ್ಫ್. ಮದುವೆಯಾದ ಮೇಲೆ ಬೇರೆ ಥರಾ. ಇದು ಸತ್ಯ. ಅದು ಒಂದೇ ಸೂರಿನಡಿ ಇದ್ದರೂ ಒಂದೇ. ಬೇರೆ ಬೇರೆ ಸೂರಿನಡಿ ಇದ್ದರೂ ಒಂದೇ....

ನಿಮ್ಮಂತೆ ಒಂದು ಸಲ ಮುಖ ನೋಡಿ, ಬಾಲ್ಕನಿಯಲ್ಲೋ, ಕೈತೋಟದಲ್ಲೋ 10 ನಿಮಿಷ ಮಾತಾಡಿ ಮದುವೆ ಆಗೋಕೆ ನಂಗೆ ಭಯ..... ಇಟ್ ಇಸ್ ಬಿಗ್ ಡಿಸಿಶನ್ ಅಮ್ಮ...

ನಮ್ಮಂತೆ ಆಗುಂತ ನಾನು ಹೇಳ್ತಿಲ್ಲ. ಪ್ರೀತಿಸಿಯೇ ಮದುವೆಯಾಗು. ಆದರೆ ಮದುವೆಗೆ ಮೊದಲೇ, ಮದುವೆ ಆದವರಂತೆ ಬದುಕುವುದು ಬೇಡ.... ಅದು ನಮ್ಮ ಸಂಸ್ಕೃತಿ ಅಲ್ಲ.

ಅಮ್ಮ, ಆದರೆ ನಾನು ಅಲ್ಲಿಲ್ಲ. ಇಲ್ಲಿದ್ದೇನೆ ಎಂಟು ವರ್ಷಗಳಿಂದ, ಅದು ನನಗೆ ಸಂಸ್ಕೃತಿಗಿಂತ ಬದುಕು ಮುಖ್ಯ.

ಆದರೆ ನಾವಲ್ಲಿದ್ದೇವೆ. ನಿನ್ನನ್ನು ಎತ್ತಿ ಬೆಳೆಸಿದ ಅಪ್ಪ, ಅಮ್ಮ,ಒಡಹುಟ್ಟಿದ ಅಣ್ಣ, ಅಜ್ಜಿ, ತಾತ ಅಷ್ಟೊಂದು ನೆಂಟರು, ಸ್ನೇಹಿತರು.

ಆದರೆ ಬದುಕು ನಿಮ್ಮದಲ್ಲ, ನನ್ನದು.

ನಿನ್ನ ಬದುಕು ನಮ್ಮದು ಸಹ ಅಲ್ವಾ, ಬರೀ ನಿನ್ನದು ಹೇಗಾಗುತ್ತೆ?

ಪ್ರೀತಿ ವಿಷಯದಲ್ಲಿ ಹಾಗೆ. ಇದು ಅಮೆರಿಕಾ.

ಪ್ರೀತಿ ಎಲ್ಲಾ ಕಡೆ ಒಂದೇ. ಅಮೇರಿಕಾ ಆದ್ರೂ ಅಷ್ಟೇ, ಇಂಡಿಯಾ ಆದ್ರೂ ಅಷ್ಟೇ. ರಕ್ಷಾ, ಒಂದು ಸಲ ನಮ್ಮ ಬಗ್ಗೆ ಯೋಚನೆ ಮಾಡು, ನಾವು ಜನಕ್ಕೆ ಹೇಗೆ ಮುಖ ತೋರಿಸೋಣ, ಅಮೆರಿಕ ತುಂಬಾ ನಮ್ಮವರೇ ತುಂಬಿ ಹೋಗಿದ್ದಾರೆ. ಅಮೆರಿಕ ಸುದ್ದಿ ಗಂಟೆಯಲ್ಲಿ ಇಂಡಿಯಾ ತಲುಪುತ್ತೆ.... ನೋಡು ನಮ್ಮ ಫ್ರೆಂಡ್ ಗಿರಿರಾವ್ ಮಗಳ ಡೈವರ್ಸ್ ವಿಷಯ.

ಅಮ್ಮ, ನೀವು ಹಿಂದಿನ ಶತಮಾನದಲ್ಲಿದ್ದೀರಿ..... ಇಂಥ ವಿಷಯಗಳಲ್ಲಿ ನಿಮಗೆ ನನಗಿಂತ ನನ್ನ ಖುಷಿಗಿಂತ ಸುತ್ತಲಿನ ಜಗತ್ತು ಮುಖ್ಯ. ಬೇರೆಯವರು ಏನಂತಾರೆ ಮುಖ್ಯ. ಯು ಹ್ಯಾವ್ ಅ ಪೋರ್ಟ್ರೈಟ್ ಆಫ್ ದ ಐಡಿಯಲ್ ಫ್ಯಾಮಿಲಿ. ಯು ಹ್ಯಾವ್ ಟು ಲೀವ್ ಅಫ್ ಟು ಇಟ್. ಒಂದು ಗೆರೆಯೂ ಕೊಂಕಾಗಬಾರದು.

ರಕ್ಷಾ, ನನಗೆ ನಿನ್ನ ಬಗ್ಗೆ ಎಷ್ಟೊಂದು ಕನಸುಗಳಿವೆ.

ಅಮ್ಮ ಬೀ ಕ್ಲಿಯರ್. ಸೂಪರ್ ಫಿಷಿಯಲ್ ಆಗಿ ಯೋಚಿಸಬೇಡ. ಆ ಕನಸು ನನ್ನ ಸುಖದ ಬಗ್ಗೆನಾ ನಿಮ್ಮ ಇಮೇಜ್ ಬಗ್ಗೆನಾ? ನಂಗೆ ಅರ್ಥವಾಗುತ್ತೆ, ಭಾರಿ ಪಾರ್ಟಿ ಹಾಲಲ್ಲಿ ಎಂಗೇಜ್ಮೆಂಟ್ ಗ್ರಾಂಡ್ ಛತ್ರದಲ್ಲಿ ಮದುವೆ. ಐದು ಭಕ್ಷ್ಯ, ಧಾರೆಗೆ ಜಿಗಿಜಿಗಿ ಕಾಂಜೀವರಂ. ಫೈವ್ ಸ್ಟಾರ್ ಹೋಟೆಲ್ ರಿಸೆಪ್ಶನ್! 20 ಸಾವಿರದ ಚಮಕಿ ಕೆಲಸದ ಐಶ್ವರ್ಯ ರೈ ಸೀರೆ. ನಿನ್ನ ರಕ್ಷಾ ಮದುವೆ. ಜೋಡಿ ಎಷ್ಟು ಚೆನ್ನಾಗಿದೆ. ಯು ಆರ್ ವೆರಿ ಲಕ್ಕಿ ನಿಮ್ಮ ಮಗಳಿಗೆ ಅಮೆರಿಕದಲಿ ತುಂಬಾ ಒಳ್ಳೆ ಕೆಲಸ ಇದೆಯಂತೆ. ಲಕ್ಷಸ್ ಕಾರು ಓಡಿಸ್ತಾಳಂತೆ... ನಿಮ್ಮ ಅಳಿಯನ ನೋಡಿದ್ದೆ. ದೇಸಿ ಅಲ್ಲ ಅಂತಾನೆ ಅನ್ನಿಸೊಲ್ಲ. ನೀವೆಲ್ಲ ಹಾಗೆ ತಿಳಿಸಿ ಆಗಿರದಿದ್ದರೆ ಹಿ ಇಸ್ ವೈಟ್ ಸಂತೋಷಾ. ಆದ್ರೆ ಇಂಡಿಯನ್ ಅನ್ನಿಸೋ ಹಾಗೆ ನಡ್ಕೋಬೇಕು. ಕರಿಯನಂತು ಸಾಧ್ಯವೇ ಇಲ್ಲ. ನಮ್ಮಂತ ರೆಸಿಸ್ಟ್ ಇನ್ನೊಬ್ಬರಿಲ್ಲ. ಎಲ್ಲೂ ಹಿಪ್ಪೊಕ್ರಸಿ.

ಏನೇನು ಮಾತಾಡ್ತಿದ್ದಿ ನೋಡು... ಎಲ್ಲಿಂದ ಎಲ್ಲಿಗೆ ಹೋಗಿ ಬಿಟ್ಟೆ?

ಸಾರಿ....ಅಮ್ಮ ನಾನು ನಿಮ್ಮ ನಂಬಿಕೆಗೆ ತಕ್ಕ ಹಾಗೆ ನಡ್ಕೊಂಡ್ರೆ ನನಗೆ ನಾನೇ ಮೋಸ ಮಾಡಿಕೊಂಡ ಹಾಗೆ.

ಎಂಟು ವರ್ಷದಿಂದ ಅಮೆರಿಕದಲ್ಲೇ ಕಳೆದಿದೆ ಆ ಮಬ್ಬು ನಿನ್ನ ನಂಬಿಕೆಗಳ ಮೇಲೆ ಮುಸುಕು ಹಾಕಿವೆ.
ಸ್ಥಳ ಬದಲಾಯಿಸಿ ಬಿಟ್ಟರೆ ಅಷ್ಟು ಸುಲಭವಾಗಿ ನಂಬಿಕೆಗಳು ಬದಲಾಗಲ್ಲ. ಬರೀ ಫಿಜಿಕಲ್ ಸ್ಪೇಸ್ ಪ್ರಶ್ನೆ ಅಲ್ಲ. ಎಮೋಷನಲ್ ಇಂಟೆಲಿಕ್ಚುವಲ್ ಅಂಡ್ ಸ್ಪಿರಿಚುವಲ್ ಸ್ಪೇಸ್ ಕೂಡ.
ನೀನು ತುಂಬಾ ಸೆರೆಬ್ರಲ್ ಆಗ್ಬಿಟ್ಟಿದೆ. ನಿನ್ನನ್ನು ಅಮೆರಿಕಾಗೆ ಕಳಿಸಿದ್ದೆ ತಪ್ಪು.
ನನ್ನನ್ನು ಏನಾದರೂ ಬದಲಿಸಿದ್ರೆ ಅದು ಬರೀ ಅಮೆರಿಕ ಅಲ್ಲ, ನನ್ನೊಳಗೆ ಆಗಿರೋ ಶಿಫ್ಟ್ ಬಹುಶಃ ಎಲ್ಲಿದ್ದರೂ ಆಗ್ತಿತ್ತು.
ಅಟ್ ಲಿಸ್ಟ್ ನಮ್ಮೆಲ್ಲರಿಗೂ ಹಿಂಸೆ ಆಗದ ರೀತಿಲಿ.
ನಿಮಗೆ ನಿಮ್ಮ ನೆಮ್ಮದಿ ಮುಖ್ಯನೋ ನನ್ನ ಸುಖಾನೋ...
ನಿನ್ನ ಸುಖದಲ್ಲಿ ನಮ್ಮ ನೆಮ್ಮದಿ ಇದೆ. ನೀನು ಹೀಗೆ ಮಾಡೋದ್ರಲ್ಲೇ ನಿನ್ನ ಸುಖ ಇದೆ ಅನ್ನೋದು ನಿನ್ನ ಭ್ರಮೆ ಅಷ್ಟೇ.
ಅಟ್ ಲೀಸ್ಟ್ ಒನ್ಸ್ ನನ್ನ ಭ್ರಮೆಗಳಿಗೆ ಸರೆಂಡರ್ ಆಗೋಕೆ ಅವಕಾಶ ಕೊಡು. ನನ್ನ ಇಡೀ ಬದುಕನ್ನು ಒಬ್ಬ ವ್ಯಕ್ತಿ ಜೊತೆ ಹಂಚಿಕೊಳ್ಳೋಕೆ ಮೊದಲು ಐ ವಾಂಟ್ ಟು ಬೀ ಶೂರ್.
ಇನ್ ಮ್ಯಾರೇಜು ಯು ಕ್ಯಾನ್ ನೆವರ್ ಬಿ ಶೂರ್.
ಅಮ್ಮ ನಾನು ಅಮೇರಿಕಾಗೆ ಬಂದಾಗ ನನಗೆ 21. ನೀನು ನನ್ನ ತಡೀಲಿಲ್ಲ. ಓದಿದೆ ಕೆಲಸ ಹಿಡಿದೆ. 15 ಗಂಟೆ ಕಾಲ ದುಡಿದು ರಾತ್ರಿ ಸಬ್ವೇಲಿ ತೂಕಡಿಸುತ್ತಾ ಮನೆ ಸೇರಿ ಪ್ರಮೋಷನ್ ಮೇಲೆ ಪ್ರಮೋಷನ್ ಗೆಟ್ಟಿಸಿದೆ. ನೀನು ಯಾಕೆ ಕಷ್ಟ ಪಡ್ತೀಯ ಇಷ್ಟು ಅನ್ನಲಿಲ್ಲ. ದಿನೇ ದಿನೇ ನಾನು ಇಲ್ಲಿಯ ಬದುಕಿಗೆ ಒಗ್ಗಿದೆ. ಬ್ಯಾಕ್ ಪ್ಯಾಕ್ ಹೊತ್ತು ಒಬ್ಬಳೇ ರಾಕಿ ಪರ್ವತಗಳ ಉದ್ದಕ್ಕೂ ಸುತ್ತಿದೆ. ಅಪರಿಚಿತ ಸಹಾಯಾತ್ರಿಗಳ ಜೊತೆ ಬಣ್ಣ ಬಣ್ಣದ ದೀಪಗಳ ಪಬ್ಗಳಲ್ಲಿ ಬಿಯರ್ ಕುಡಿದೆ. ಪೆಸಿಫಿಕ್ ಸಾಗರದಲ್ಲಿ ಮನದಣಿಯೇ ಈಜಿದೆ. ನೀನು ತಪ್ಪು ಅನ್ನಲಿಲ್ಲ. ಒಂದು ಸಲ ನೀನೇ ಹೇಳಿದ್ದೆ ಜ್ಞಾಪಿಸ್ಕೋ, ನನಗೆ ನಿನ್ನ ಕಂಡ್ರೆ ಅಸೂಯೆ ಆಗುತ್ತೆ ರಕ್ಷಾ. ಐ ವಿಶ್ ಎವರ್ ಲೈಕ್ ಯು. ನಾನು 30 ವರ್ಷ ತಡವಾಗಿ ಹುಟ್ಟಿದ್ರೆ ಎಷ್ಟು ಚೆನ್ನಾಗಿರ್ತಿತ್ತು ಅಂತ. ನೀನು ಮೊದಲು ಬೆಂಗಳೂರಲ್ಲಿ ಒಬ್ಬಳೇ ಸಿನಿಮಾಗೆ ಹೋಗೋದು ಅಭ್ಯಾಸ ಮಾಡಿಕೋ ಆಮೇಲೆ ಬ್ಯಾಕ್ ಪ್ಯಾಕಿಂಗ್ ಎಲ್ಲಾ ಎಂದು ನಾನು ನಕ್ಕಿದ್ದೆ. ಆದ್ರೆ ಅಮ್ಮ ವಿನ್ನಿಟ್ ಕಮ್ಸ್ ಟು ಮ್ಯಾರೇಜ್ ಯಾಕೆ ಹಾಗಾಡ್ತಿಯಾ.... ಐ ಡೋಂಟ್ ವಾಂಟ್ ಟು ಟೇಕ್ ರಿಸ್ಕ್ ಐ ವಾಂಟ್ ಟು ಬಿ ಶೂರ್.
ಅನೌನ್ಸಿಂಗ್ ಅರೈವಲ್ ಕೌಲಾಲಂಪೂರ್.....ಸೆಕ್ಯೂರಿಟಿ ಚೆಕ್.... ಪ್ಲೀಸ್ ಪ್ರೋಸಿಡ್... ಗೇಟ್ ೨... ಕಾಲಿಂಗ್ ಪ್ಯಾಸೆಂಜರ್ ರಿಚರ್ಡ್ ಫಾಸ್ಟರ್.... ಫ್ರಾಂಕ್ ಪರ್ಟ್... ಏನೇನೋ ಪ್ರಕಟಣೆ ಎಡೆಬಿಡದೆ ಸಾಗಿತ್ತು. ಜಗತ್ತಿನ ದೊಡ್ಡ ಪಟ್ಟಣಗಳ ಎಲ್ಲಾ ವಿಮಾನ ನಿಲ್ದಾಣಗಳು ಒಂದೇ. ಇಂದೊಂದು ಬದುಕು ಮುಂದೊಂದು ಬದುಕಿನ ನಡುವಿನ ನಿರ್ವಾತದಲ್ಲಿ ಇರುವ ಪ್ರಯಾಣಿಕರು. ಸುತ್ತುವರಿದ ಕಾಫಿ, ಪಾಪ್ ಕಾನ್, ಚೀಸ್, ಆಫ್ಟರ್ ಶೇವ್, ಪಿಜ್ಜಾ, ಪರ್ಫ್ಯೂಮ್ ಪರಿಮಳಗಳ ನಡುವೆ ಸಾವಿರಾರು ಯಾತ್ರಿಗಳು. ಎದುರಿಗೆ ಕೂತಿದ್ದ ಮಾಸಲು ಬಟ್ಟೆಯ ಪ್ರವಾಸಿ ಜೇಬಿನಿಂದ ನೇಲ್ ಕ್ಲಿಪ್ ಬರ ತೆಗೆದು ತನ್ನ ಕಪ್ಪು ಗುರುಗಳನ್ನು ಕತ್ತರಿಸಿ ಅಲ್ಲೇ ಹಾಕುತ್ತಿದ್ದ. ಎದುರಿನ ಗಾಜಿನ ಗೋಡೆಯಲ್ಲಿ ತನ್ನ ಕೂದಲು ಸರಿಪಡಿಸಿಕೊಳ್ಳುತ್ತಿದ್ದಾಳೆ ಅವನ ಪಕ್ಕದಲ್ಲಿ ಕೂತ ಯುವತಿ. ತಾಯಿ ತೊಡೆ ಮೇಲೆ ನಿದ್ದೆ ಮಾಡಿ ಎದ್ದ ಐದು ವರ್ಷದ ಪುಟಾಣಿಯ ಕೆನ್ನೆ ಮೇಲೆ ಅಮ್ಮನ ಸ್ಕರ್ಟಿನ ನೆರಿಗೆಗಳ ಕೆಂಪು ಗುರುತು. ಕಾಲಗಲಿಸಿ ಕೂತು ಗೊರಕೆ ಹೊಡೆಯುತ್ತಿರುವ ಕಂದು ಸೂಟಿನ ದಡಿಯನಿಗೆ ತನ್ನ ಜಿಪ್ ತೆಗೆದಿರುವುದು ಗೊತ್ತೇ ಆಗಿಲ್ಲ. ಪುಟ್ಟ ಮಗ ತಂದೆಯನ್ನು ಕೇಳುತ್ತಿದ್ದಾನೆ, " ಅಪ್ಪ, ನಾವು ಶಿಕಾಗೂ ಬಿಟ್ಟು ಹೋಗಲೇಬೇಕೇ?ನನ್ನ ಫ್ರೆಂಡ್ಸ್ ಎಲ್ಲ ಇಲ್ಲೇ ಇದ್ದಾರೆ" ಹನಿಮೂನ್ ಗೆ ಹೊರಟಿರುವ ಪಂಜಾಬಿ ಜೋಡಿ. ಅವಳ ಕೈ ತುಂಬಾ ಇರುವ ಮೆಹೆಂದಿ ಮಾಸಿಲ್ಲ. ನನ್ನ ಪಕ್ಕ ಕೂತಿದ್ದ ಸುಮಾರು ನನ್ನದೇ ಬಯಸಿನ ಹೆಂಗಸು, ಯಾವಾಗ ಬಂದು ಕೂತಳೋ ಗೊತ್ತಿಲ್ಲ. ನೀಲಿ ಜೀನ್ಸ್ ನ ಮೇಲೆ ಬಿಳಿ ಟಾಪ್, ಉದ್ದದ ನೀಲಮಣಿ, ಹವಳ, ಸರ, ಕತ್ತಿನ ಸುತ್ತ ಬಣ್ಣ ಬಣ್ಣದ ಬಂಧನಿ ಸ್ಕಾರ್ಫ್. ಅದನ್ನು ಕಂಡ ಕ್ಷಣ ವಿಚಿತ್ರ ಆತ್ಮೀಯತೆ ಎಲ್ಲೋ ಅವಳು ನಮ್ಮವಳೆ ಎಂಬ ಭ್ರಮೆ.

ಮುಂದುವರೆಯುವುದು.....

HOUSE FOR SALE

A 14 squares old house built on a 40ft X 80ft North facing Plot is available for sale. The house is in 4th Cross, Saraswathipuram, Mysore-570009
Please Contact: 097394 25632

ಕುಸಿಯುತ್ತಿರುವ ಹಿಮಾಲಯ

ಡಾ. ಮಂಜುನಾಥ್

ವೇದಗಳಿಗೂ ಹಿಂದೆ ಈ ನಾಡನ್ನು ಗುರುತಿಸುವ ಬೆಟ್ಟವೆಂದರೆ ಹಿಮಾಲಯ. ಭರತಖಂಡವೆಂದು ಹೆಸರಾದ ಈ ನಾಡನ್ನು 'ಭರಿಸುವ' ನದಿಗಳೇ ಈ ಬೆಟ್ಟದ ಸಾಲಿನಿಂದ ಬಂದು ನಮ್ಮ ನಾಡನ್ನು 'ಭರತವರ್ಷ' ವಾಗಿಸುತ್ತವೆ.

ಸಿಂಧೂ, ಗಂಗಾ, ಯಮುನಾ, ಬ್ರಹ್ಮಪುತ್ರಾ ನದಿಗಳಿಲ್ಲದ ನಾಡು ಭರತವರ್ಷವೇ ಅಲ್ಲ. ಜಂಬೂದ್ವೀಪದಿಂದ ಒಡೆದುಕೊಂಡು, ತೇಲಿಬಂದು, ಏಷಿಯಾ ಖಂಡಕ್ಕೆ ಜೋರಾಗಿ ಗುದ್ದಿದಾಗ, ಅಲ್ಲಿದ್ದ ಕಲ್ಲು ಮಣ್ಣುಗಳನ್ನು ಮೇಲಕ್ಕೆ ನೂಕಿ, ಟಿಬೆಟ್ ನ್ನು ಬೆಟ್ಟವಾಗಿ ಮಾರ್ಪಡಿಸಿತು. ಅಲ್ಲಿ ಮೇಲೆದ್ದ ಈ ಗೋಡೆ, ಬರುವ ಗಾಳಿಗಳನ್ನೆಲ್ಲಾ ತಡೆದು, ಮೋಡಗಳು ಇಲ್ಲಿಯೇ ಮಳೆಗರೆಯುವಂತೆ ಮಾಡಿದ್ದರಿಂದಲೇ ಈ ನದಿಗಳು ತುಂಬಿ ಹರಿಯುವಂತೆ ಮಾಡಿದವು.

ನಮ್ಮ ಸನಾತನ ಧರ್ಮಕ್ಕೆ ಈ ಹೊಳೆಗಳು ಬೆಟ್ಟದ ಸಾಲೇ ಆಸರೆ. ಇವುಗಳಿಲ್ಲದಿದ್ದರೆ, ನಮ್ಮ ಯಾವ ವೇದ, ಉಪನಿಷತ್ತು, ಪುರಾಣಗಳೂ ಇಲ್ಲ. ಈ ಹೊಳೆಗಳು ನಾಡಿನಲ್ಲಿ ಹರಿದು ಕಡಲನ್ನು ಸೇರಿ, ನಮ್ಮ ಎಲ್ಲಾ ಮಹಾಭಾರತ, ರಾಮಾಯಣ, ಪುರಾಣಗಳ ಮೂಲವಾಗಿವೆ. ಇವುಗಳಲ್ಲದೇ ನಮ್ಮ ನಾಡೇ ಇಲ್ಲ.

ಈ ಹಿಮಾಲಯ ಹುಟ್ಟಿದ್ದೇ, ಭೂಮಿ ಜರುಗುವುದರಿಂದ. ಆ ಜರುಗಾಟ, ಭೂಖಂಡಗಳ ಜಗಳಾಟ, ಎಂದೂ ನಿಂತೇ ಇಲ್ಲ. ಜರುಗಿದಾಗ ಭೂಕಂಪ ಎನ್ನುತ್ತೇವೆ.

ಮೊದಲಿಗೆ, ಈ ಬೆಟ್ಟದ ಸಾಲಿಗೆ ಹೋಗುತ್ತಿದ್ದವರು, ಋಷಿ ಮುನಿಗಳು, ತಮ್ಮ ತಪಕ್ಕಾಗಿ ಇನ್ನಾರೂ ಹೋಗುತ್ತಲೇ ಇರಲಿಲ್ಲ ಎಂದರೆ ಹೆಚ್ಚಿನ ಮಂದಿ ಇರಲಿಲ್ಲ . ಋಷಿಗಳು ಯಾವ ಮನೆಯನ್ನೂ ಕಟ್ಟುತ್ತಿರಲಿಲ್ಲ. ಯಾವುದೋ ಒಂದು ಗವಿಯಲ್ಲಿ ಕೂತು ತಪ ಮಾಡಿ ಸೂರ್ಯಸ್ನಾನಕ್ಕಾಗಿ ಹೊರಬಂದು, ಹೊಳೆಗಳಲ್ಲಿ ಮಿಂದು, ಮತ್ತೆ ಒಳಹೋಗುತ್ತಿದ್ದರು.

ಆದರೆ ಈಗ ತಪ ಮಾಡುವುದಕ್ಕೆ ಯಾವ ಮಂದಿಯೂ ಹೋಗುವುದಿಲ್ಲ. ಹೋಗುವವರೆಲ್ಲಾ ತಮ್ಮ ಬಿಡುವಿನಲ್ಲಿ ತಿರುಗಾಡಿ ಬರೋಣ ಎಂದು ಹೋಗುವವರೆಗೆ ಸರಿ. ಈಗ ಆಶ್ರಮಗಳೆಲ್ಲಾ ಪುಣೆ, ಬೆಂಗಳೂರು, ಕೊಯಮತ್ತೂರುಗಳಲ್ಲಿ ಇವೆ ಎಂದರೆ ಋಷಿಮುನಿಗಳು ಮುಂಬರುವ ಅನಾಹುತಗಳಿಂದ ಪಾರಾಗಲು ಮುಂದಾಲೋಚನೆಯಿಂದ ಈ ಮುನಿ ಆಶ್ರಮಗಳನ್ನು ದೂರ ಕಟ್ಟಿದರು.

ಆದರೆ ನೋಡಲು ಬರುವವರೇ ಹೆಚ್ಚಾದುದರಿಂದ ಅವರಿಗೆ ಓಡಾಡಲು ಹಾದಿಗಳು, ಹೋಟೆಲ್ ಗಳು ಅಗೆದು ಪಾಯ ಹಾಕಿ ಹೋಟೆಲ್ ಗಳನ್ನು ಕಟ್ಟಬೇಕು. ಎಲ್ಲಿಯೋ ಕಾಣದ ಕಡೆ ಕಟ್ಟಿದರೆ ವ್ಯಾಪಾರವಾಗುತ್ತದೆಯೇ? ಇಲ್ಲ. ಆದ್ದರಿಂದ ನದಿಯ ದಂಡೆಯಲ್ಲಿಯೇ ಹೋಟೆಲ್ ಗಳಾಗಬೇಕು. ಅದರಲ್ಲೂ ನಾಲ್ಕು ಕೋಣೆಗಳಿದ್ದರೆ, ಏನು ವ್ಯಾಪಾರವಾದೀತು? ಒಂದು ನಾಲ್ಕು ಮಳಿಗೆ ಇದ್ದರೆ ೨೦ ಕೋಣೆಗಳಾದರೂ ಆಗಬಹುದು. ಆಗ ೪೦ ಮಂದಿಗೆ ನೆಲೆಯಾಗುತ್ತದೆ.

ಇದೆಲ್ಲಾ ತಪ ಮಾಡುವುದು ಬಿಟ್ಟು ಯವ್ವಾರ ಮಾಡಲು ಮೊದಲು ಮಾಡಿದ್ದರಿಂದ ಜರುಗಾಟ ಹೆಚ್ಚಿ, ಬಿರುಕುಗಳು ಇನ್ನೂ ಹೆಚ್ಚಾಗಿವೆ. ನಾನು ಮೂರು ಬಾರಿ ಹಿಮಾಲಯ, ಅದರ ಹಿಂದಿನ ಕೈಲಾಸ ನೋಡುವುದಕ್ಕೆ ಹೋಗಿದ್ದೇನೆ. ಈ ಬೆಟ್ಟಗಳೆಲ್ಲವೂ ೭೦ ಡಿಗ್ರಿ ಕೋನದಲ್ಲಿ ನಿಂತಿವೆ. ಇನ್ನೂ ಕೋನ ಹೆಚ್ಚಾಗುತ್ತಿದೆ.

ಚಾರ್ ಧಾಮ, ನೋಡಬೇಕಾದುದೆ. ಗವಿಗಳನ್ನು ಕೊರೆಯಲೇ ಬೇಕು. ಕೊರೆದಾಗ ಬರಿಯ ಮಣ್ಣು ಕುಸಿದೇ ಕುಸಿಯುತ್ತದೆ. ಅದೇ ಈಗ ಉತ್ತರ ಕಾಶಿಯಲ್ಲಿ ಆಗಿರುವ ಅನಾಹುತ. ಇದೇನೂ ಆಕಸ್ಮಿಕವಲ್ಲ. ಬಂಡೆಗಳೇ ಇಲ್ಲದ ಕಡೆ, ಬರಿಯ ಮಣ್ಣಿನಲ್ಲಿ ಕೊರೆದರೆ ಅದಕ್ಕೆ ಎಷ್ಟು ಕಬ್ಬಿಣದ ಸಳೀ, ಕಾಂಕ್ರೀಟ್ ಹಾಕಿದರೂ ಕುಸಿದೇ ಕುಸಿಯುತ್ತದೆ.

ಹಿಂದೆ ಇದ್ದ ಸಿಂಧೂ ಈಗ ಪಾಕಿಸ್ತಾನಕ್ಕೆ ಸೇರಿದೆ. ಸರಸ್ವತಿ ಒಣಗಿ ಹೋಗಿದ್ದಾಳೆ. ಅವಳೊಡನೆ ಸೇರುತ್ತಿದ್ದ ಯಮುನ ಈಗ ಗಂಗೆಯ ಜೊತೆ ಸೇರಿದ್ದಾಳೆ. ಇನ್ನು ಕೆಲವು ವರ್ಷಗಳ ಮೇಲೆ ಬ್ರಹ್ಮಪುತ್ರಾ, ಕಾಣೆಯಾಗುತ್ತಾಳೆ. ಆಗ ನಮ್ಮ ಸನಾತನ ಧರ್ಮದ ಗತಿ ಏನು?

ಕೇವಲ ಕಟ್ಟುವುದನ್ನು ನಿಲ್ಲಿಸಿದರೆ ಕುಸಿಯುವುದು ನಿಲ್ಲುವುದಿಲ್ಲ. ಜೀವ ಹಾನಿ ಆಗದಿರಬಹುದು. ಭರತ ಖಂಡ ಪ್ರತಿ ವರ್ಷ ೪ ಅಂಗುಲ, ಟಿಬೆಟ್ / ಹಿಮಾಲಯದ ಕೆಳಗೆ ಸರಿಯುತ್ತಿದೆ. ಕೆಲವು ಸಾವಿರ ವರ್ಷಗಳಲ್ಲಿ ಉತ್ತರ ಪ್ರದೇಶ, ಉತ್ತರಾಖಂಡ, ಹಿಮಾಚಲ, ಕಾಶ್ಮೀರ, ಬಿಹಾರ, ಅಸ್ಸಾಂ ಯಾವುವೂ ಇಲ್ಲದೆ, ಕೇವಲ ವಿಂಧ್ಯ ಪರ್ವತದಿಂದ ದಕ್ಷಿಣಕ್ಕೆ ಮಾತ್ರ ಉಳಿಯುತ್ತದೆ.

ಆಗ ಉತ್ತರದಲ್ಲಿರುವವರೆಲ್ಲಾ ದಕ್ಷಿಣಕ್ಕೆ ಬಂದು, ದ್ರಾವಿಡ ಮುನ್ನೇತ್ರ ಕಳಗಂ ಇಲ್ಲದಂತಾಗುತ್ತದೆ. ಆದುದರಿಂದ ನಾವು ತಿಳಿಯಬೇಕಾದುದು. ಈ ಭೂ ಮಾತೆ ಸ್ಥಿರವಲ್ಲ. ಅವಳ ಕುಣಿತದಲ್ಲಿ ಯಾವ ಖಂಡಗಳೂ ಸ್ಥಿರವಲ್ಲ. ಇದರ ನಡುವೆ ಆಕೆ, ತನ್ನ ಹೊಟ್ಟೆ ಉರಿ ತೀರಿಸಿಕೊಳ್ಳಲೋಸುಗ ಕಾರಿದರೆ, ಇದ್ದ ಭೂಖಂಡಗಳೂ ಬೆಂದು ಹೋಗುವುವು.

ಆದರೆ ನನ್ನ ಹಿಂದೆ, ಇಭವ ಗೊಣಗುವುದು ಕೇಳುತ್ತಿದೆ. "ಅದು ಯಾವಾಗಲೋ ೪-೫ ಸಾವಿರ ವರ್ಷಗಳಾದ ಮೇಲೆ ತಾನೇ? ನಮಗೂ ಅದಕ್ಕೂ ಏನು ಸಂಬಂಧ? ಈಗಿನ IPL ನಡೆಯುವುದು ಖಚಿತ ತಾನೇ?

ಜರುಗುವುದು, ಸರಿಯುವುದು, ಕುಸಿಯುವುದೂ ನಡೆದೇ ನಡೆಯುತ್ತಿರುತ್ತದೆ. ಆದರೆ ನಮ್ಮ ಸನಾತನ ಧರ್ಮ, ಸಿಂಧೂ, ಯಮುನಾ, ಗಂಗಾ, ಬ್ರಹ್ಮಪುತ್ರಾಗಳು ಹೋದ ಮೇಲೂ ನಿಂತಿರುತ್ತದೆಯೋ?

ನೇಸರುವಿಗೆ

✍ **ವನಜಾ ರಾಜನ್**

"ಈಗ ಮತ್ತು ಆಗ" ಕೊನೆಯ ಹಾಡು ಪ್ರತಿಧ್ವನಿಸಿತು ರಿಷಿಕೇಶದಲ್ಲಿ. Bee Gees (1979) ರವರ "Staying Alive" ಹಾಡಿನ ಬಗ್ಗೆ ನಾನು ಜರ್ಮನಿಯಲ್ಲಿ ಇದ್ದಾಗ ಹೇಗೆ ನನ್ನ ಮನಸ್ಸಿನ ಆಳದಲ್ಲಿ ತಳ ಊರಿ ಇಂದು ಈಗಲೂ ಚಿರಸ್ಥಾಯಿಯಾಗಿ ಉಳಿದಿದೆ ಎಂಬ ನನ್ನ ಅನಿಸಿಕೆಗಳನ್ನು ಈ ಹಿಂದೆ ತಮ್ಮೊಡನೆ ಹಂಚಿಕೊಂಡಿದ್ದೆನು (2021) ಕರ್ನಾಟಕ ಸಂಗೀತ ಪಾಠ ನನಗೆ ಲಭಿಸಿದೆ. ಅದೇ ನನ್ನ ಐಚ್ಛಿಕ ಭಾಷೆಗಳ ಆಯ್ಕೆಯಲ್ಲಿ ಒಂದು. ಆದರೇನಾಯಿತು? ಭಾಷೆ ಯಾವುದಾದರೂ ಸರಿ, ಕಿವಿಗೆ ಇಂಪಾಗಿ ಮನಸ್ಸಿನಲ್ಲಿ ಛಾಪು ಮೂಡಿಸುವಂತಹ ಮಧುರವಾದ ಹಿತವಾದ ಹಾಡುಗಳನ್ನು ಕೇಳುವುದು ನನ್ನ ಹವ್ಯಾಸಗಳಲ್ಲೊಂದು! ಶಿಶುರ ವೇತ್ತಿ, ಪಶುರ್ ವೇತ್ತಿ, ವೇತ್ತಿ ಗಾನ ರ ಸಂಘನಿ! ಮರೆಯಾಗಿದ್ದ ಈ BEEGEES ಬಗ್ಗೆ ಓದಿ ನನ್ನ ಕುತೂಹಲ ಕೆರಳಿತು. ಕೊನೆಯ ಹಾಡು Now and Then ಎಂಬ ಅವರ ಹೇಳಿಕೆ ಓದಿ ಕಣ್ಣಿನಲ್ಲಿ ಹನಿಗೂಡಿತು. ಅವರುಗಳು ನಡೆದು ಬಂದ ಹಾದಿಯಲ್ಲಿ ಕೇವಲ ಕಲ್ಲು ಮುಳ್ಳುಗಳು! ಇಬ್ಬರನ್ನು ಕಳೆದುಕೊಂಡರು. 40 ವರ್ಷಗಳ ದೀರ್ಘ ಕಾಲದ ನಂತರ ಈ ಕೊನೆಯ ಹಾಡು ಹೊರ ಬಂದಿದೆ. ಹಾಡು ಅತ್ಯದ್ಭುತ! ಕೇಳಿದಷ್ಟು ಇನ್ನು ಕೇಳಬೇಕೆನಿಸಿತು. ಆದರೆ ದುಃಖದ ವೇದನೆಯ ನೋವಿನ ಎಲೆಗಳು ಮಧ್ಯದಲ್ಲಿ ತೂರಿ ಬಂದಿತು. Paul George ಮತ್ತು Ringo ಅವುಗಳು ಸೃಷ್ಟಿ! A.I. (Artificial Intelligence) ಕೃತಕ ತಂತ್ರಜ್ಞಾನವನ್ನು ಬಳಕೆ ಮಾಡಿ, ಹಾಡು ಕೇಳಲು ಹಿತವಾಗಿಯೂ (ಈ ಹಿಂದೆ LENNON, 1979 ರಲ್ಲಿ ಧ್ವನಿ ಮುದ್ರಣ ಮಾಡಿದರು ಆದರೆ ಚೆನ್ನಾಗಿರಲಿಲ್ಲ) ಮತ್ತೆ ಮತ್ತೆ ಆಲಿಸುವಂತೆ ಮಾಡಿದ್ದೇ ಅಲ್ಲದೆ ಅವರುಗಳು ಆಗ ನೋಡಲು ಹೇಗಿದ್ದರೋ, ಹಾಗೇ 'ಸಾಕ್ಷ್ಯಚಿತ್ರ' ದಲ್ಲಿ (Documentary) ಮಾಡಿದ್ದಾರೆ. 1968 ರಲ್ಲಿ ಭಾರತಕ್ಕೆ ಭೇಟಿ ನೀಡಿ 1 ತಿಂಗಳಿಗೂ ಹೆಚ್ಚು ಕಾಲ ರಿಷಿಕೇಶದಲ್ಲಿ ತಂಗಿದ್ದು ಧ್ಯಾನ ಗಾನ ರಚನೆಯಲ್ಲಿ ಕಾಲ ಕಳೆದಿದ್ದರು.

ಅಧಿಕೃತವಾಗಿ ಪ್ರಾರಂಭಿಸಬೇಕೆಂದು ನಿರ್ಧರಿಸಿದರು. ರಿಷಿಕೇಶ್ ನಲ್ಲಿ ಇರುವ "ಬೀಟಲ್ಸ್ ಕೆಫೆ" ನಲ್ಲಿ ಪರದೆಯ ಮೇಲೆ ತೋರಿಸಿದರು. (12 ನಿಮಿಷಗಳು) ಇವರು ಕೊಟ್ಟ ಕೊನೆಯ ಹಾಡು ಇಷ್ಟು ಚೆನ್ನಾಗಿ ಬರಲು, ಸೀನ್ ಓನೋ ಹಾಡಿನ ಸೃಷ್ಟಿಯ ಸಂಗಡ, ಕೃತಕ ತಂತ್ರಜ್ಞಾನ ಕೂಡಿಕೊಂಡು, "ಈಗ ಮತ್ತು ಆಗ" ಹೊರ ಬಂದಿತು. ಕೇಳಿದೆ. ಕಣ್ಣುಗಳು. ಕೇಳಿ ಹೇಳಿ, ಇಷ್ಟವಾಯಿತೆ ನಿಮಗೆ?

ದತ್ತು ಪುತ್ರ

ನೇಸರು ಕಥಾ ಸ್ಪರ್ಧೆಗೆ ಬಂದ ಕಥೆ

✍ ಕೆ.ಆರ್.ಮಂಗಳಗೌರಮ್ಮ

ಕೃಷ್ಣಪ್ರಸಾದ್ ಮತ್ತು ವಿಜಯಮ್ಮ ದಂಪತಿಗೆ ಐದು ಜನ ಮಕ್ಕಳು.ಈ ಐದರಲ್ಲಿ ಮೂರನೇ ಮಗಳೇ ನಮ್ಮ ಸೌಂದರ್ಯ, ನಮ್ಮ ಕಥೆಯ ನಾಯಕಿ. ಸೌಂದರ್ಯ ಹೆಸರಿಗೆ ತಕ್ಕಂತೆ ಸೌಂದರ್ಯ ವತಿಯೇ. ಸ್ವಲ್ಪ ಕಪ್ಪಾದರೂ, ಮುಖದ ಮೇಲಿನ ಕಾಂತಿ, ಅವಳನ್ನು ನೋಡಿದವರು ಮತ್ತೆ ತಿರುಗಿ ನೋಡಬೇಕೆನಿಸುವಂತೆ ಮಾಡುತ್ತಿತ್ತು. ಮೊದಲಿನಿಂದಲೂ ಲವಲವಿಕೆಯ ಹುಡುಗಿ. ಚಿಕ್ಕಂದಿನಿಂದಲೂ ಅವಳಿಗೆ ಮಕ್ಕಳೆಂದರೆ ಪ್ರಾಣ. ಚಿಕ್ಕಮಕ್ಕಳ ಗುಂಪು ಕಂಡರೆ ಮಧ್ಯೆ ಸೌಂದರ್ಯಳಿದ್ದಾಳೆಂದೇ ಅರ್ಥ. ಆದರೆ ತಂಟೆ ಮಾಡಿ ಎಲ್ಲರಿಂದಲೂ ಬೈಯ್ಯಿಸಿಕೊಂಡದ್ದಂತೂ ಇಲ್ಲವೇ ಇಲ್ಲ. ಮನೆಯಲ್ಲಿ ಅಮ್ಮ ಮಾಡಿದ ತಿಂಡಿಯನ್ನು ಅಮ್ಮನನ್ನು ಕೇಳಿ, ತನಗೆ ಕೊಟ್ಟ ಪಾಲನ್ನು ಇಟ್ಟುಕೊಂಡು, ಕೆಲವೊಮ್ಮೆ ಅಣ್ಣ ಅಕ್ಕನ ಪಾಲನ್ನು ಅಂಗಲಾಚಿ ಪಡೆದುಕೊಂಡು, ತನ್ನ ಸುತ್ತಾ ಮುತ್ತಿಕೊಳ್ಳುತ್ತಿದ್ದ ಮಕ್ಕಳಿಗೆ ಹಂಚಿ ಸಂತೋಷ ಪಡುತ್ತಿದ್ದಳು. ಆ ಮಕ್ಕಳನ್ನೆಲ್ಲಾ ಕೂಡಿಸಿಕೊಂಡು ಶಾಲೆಯ ಆಟವನ್ನೂ ಆಡುತ್ತಿದ್ದಳು. ಆ ಆಟದಲ್ಲಿ ಮಾತ್ರ ಅವಳೇ ಟೀಚರ್. ತಾನು ಶಾಲೆಯಲ್ಲಿ ಕಲಿತ ಎಲ್ಲವನ್ನೂ ತನಗಿಂತ ಚಿಕ್ಕವರಾದ ತನ್ನ ಅಕ್ಕಪಕ್ಕದ ಮನೆಯ ಎಲ್ಲಾ ಮಕ್ಕಳಿಗೂ ಹೇಳಿಕೊಡುವಾಸೆ. ಆ ಮಕ್ಕಳೂ ಅಷ್ಟೇ, ಇವಳ ಪ್ರೀತಿಯಲ್ಲಿ ಎಷ್ಟು ಮುಳುಗಿದ್ದರು ಎಂದರೆ, ಅವರ ಅಪ್ಪ ಅಮ್ಮ ಪಿಚ್ಚರಿಗೆ ಹೋಗೋಣ ಎಂದರೆ ತಾವು ಸೌಂದರ್ಯ ಅಕ್ಕಳ ಜೊತೆಯಲ್ಲೇ ಇರುತ್ತೇವೆ ಎನ್ನುವಷ್ಟು. ಸೌಂದರ್ಯಳ ಅಮ್ಮ ಒಮ್ಮೊಮ್ಮೆ, ನಿಂದ್ಯಾಕೋ, ಅತೀ ಆಯ್ತು ಕಣೆ. ನಿಮ್ಮಕ್ಕ ನೋಡು, ಮಕ್ಕಳನ್ನು ಇಷ್ಟ ಪಟ್ಟರೂ, ನಿನ್ನ ಹಾಗೆ ಅತಿಯಾಗಿ ಯಾವುದನ್ನೂ ಮಾಡಲ್ಲ. ಯಾವುದು ಅತಿಯಾದರೂ ಒಳ್ಳೇದಲ್ಲಾ ಕಣೇ ಎಂದು ಬುದ್ಧಿ ಹೇಳುತ್ತಿದ್ದದ್ದೂ ಉಂಟು.

ಶಾಲೆಯಲ್ಲಿದ್ದ ಸೌಂದರ್ಯ ಕಾಲೇಜಿನ ಮೆಟ್ಟಿಲು ಹತ್ತಿದಳು. ಮೊದಲೇ ಸುಂದರವಾಗಿದ್ದ ಅವಳು ಈಗ ವಯಸ್ಸಿಗೆ ತಕ್ಕಂತೆ ಮೈಕೈ ತುಂಬಿಕೊಂಡು ಮತ್ತೂ ಚೆಲುವೆಯಾದಳು. ಎಷ್ಟೋ ಹದಿಹರೆಯದ ಹುಡುಗರು ಇವಳನ್ನು ಇಷ್ಟಪಟ್ಟರೂ ಇವಳ ಗಂಭೀರ ವರ್ತನೆ ನೋಡಿ, ಅವಳಿಗೆ ಹತ್ತಿರವಾಗಲು ಬಯಸಿದರೂ ಸಾಧ್ಯವಾಗದೆ ಬರೀ ಗೆಳೆತನಕ್ಕಷ್ಟೇ ಸೀಮಿತರಾಗಿದ್ದರು. ಕಾಲೇಜು ಮುಗಿಸಿ, ಸ್ನಾತಕೋತ್ತರ ಪದವಿಯನ್ನೂ ಸುಲಲಿತವಾಗಿ ಯಾವುದೇ ಅಡೆತಡೆಗಳಿಲ್ಲದೆ ಮುಗಿಸಿದಳು. ಇಷ್ಟಾಗುವಷ್ಟರಲ್ಲಿ ಅವಳ ಅಕ್ಕನ ಮದುವೆ ನಿಗದಿಯಾಗಿತ್ತು.

ಅಕ್ಕನ ಮದುವೆಗೂ ಮುಂಚೆಯೇ ಒಳ್ಳೆಯ ಕೆಲಸ ಇವಳನ್ನರಸಿ ಬಂದಿತ್ತು. ಕೆಲಸಕ್ಕೆ ಸೇರಿದಳು. ಹೊಸಬಳಾದರೂ ಕಚೇರಿಯಲ್ಲೂ ತನ್ನ ಸ್ನೇಹಸ್ವಭಾವದಿಂದ ಎಲ್ಲರಿಗೂ ಅಚ್ಚುಮೆಚ್ಚಾದಳು. ಅಪ್ಪನಿಗೆ ಸಹಾಯವಾಗಲಿ ಎಂದು ತನ್ನ ಸಂಬಳವನ್ನೆಲ್ಲಾ ಪ್ರತೀ ತಿಂಗಳೂ ಅಪ್ಪ ಬೇಡವೆಂದರೂ ಅವರ ಕೈಯಲ್ಲಿಡುತ್ತಾ ಬಂದಳು. ಅಕ್ಕನ ಮದುವೆ ಹತ್ತಿರ ಬಂದಾಗ, ಹತ್ತು ದಿನ ರಜೆ ಪಡೆದು ಅಮ್ಮನ ಕೆಲಸಗಳಿಗೆ ಬಲಗೈಯಾಗಿ ನಿಂತಳು. ಅಕ್ಕನ ಭಾವನೆಗಳಿಗೆ ಆಸರೆಯಾಗಿ, ಮದುವೆಯ ದಿನ ಹತ್ತಿರ ಬಂದಂತೆ ಅಕ್ಕನಿಗೆ ಸಮಾಧಾನ ಮಾಡುತ್ತಾ ಆಕೆಯ ಮನದ ತಳಮಳಗಳಿಗೆ ಸಾಕ್ಷಿಯಾದಳು.

ಮದುವೆಯ ದಿನ, ಸೌಂದರ್ಯ ಉಟ್ಟ ತಿಳಿ ಹಸಿರು ಒಡಲಿಗೆ ಕಡುನೀಲಿ ಬಣ್ಣದ ಅಂಚಿನ ರೇಷ್ಮೆ ಸೀರೆ, ಉದ್ದದ ಜಡೆಗೆ ಬಿಲ್ಲೆಯಲಂಕಾರ, ಸೊಂಟಕ್ಕೆ ಡಿಸೈನಿನ ಲೇಸಿನ ಡಾಬು ಹಣೆಯಲ್ಲಿ ಎಣ್ಣೆಗೆಂಪು ಬಣ್ಣದ ಬಿಂದಿಯ ಕೆಳಗೆ, ದೇವರ ಪೂಜೆಯ ಪ್ರಸಾದದ ಕುಂಕುಮ, ಕಿವಿಯಲ್ಲಿ ಅತ್ತ ದೊಡ್ಡದೂ ಅಲ್ಲದ, ತೀರ ಚಿಕ್ಕದೂ ಅಲ್ಲದ ಓಲೆ ಝುಮಕಿ ಅವಳ ಅಂದಕ್ಕೆ ಮೆರುಗನ್ನು ಇತ್ತಿದ್ದವು. ಅವಳು ನಡೆದಾಗೆಲ್ಲಾ ಕಾಲಲ್ಲಿನ ಪುಟ್ಟ ಗೆಜ್ಜೆ, ಶಬ್ದ ಮಾಡಲೋ ಬೇಡವೋ ಎಂಬ ನಾಚಿಕೆಯಿಂದ ಸಣ್ಣದಾಗಿ ಘಲ್ ಘಲ್ ಎಂದು ಕೇಳಿಯೂ ಕೇಳಿಸದಂತೆ ಶಬ್ದ ಮಾಡುತ್ತಿದ್ದವು. ಮನೆಯಲ್ಲಿ ಮದುವೆಯ ವಯಸ್ಸಿನ ಗಂಡುಮಕ್ಕಳಿರುವ ತಾಯಂದಿರ ದೃಷ್ಟಿ ಸೌಂದರ್ಯಳ ಹಿಂದೆ ಮುಂದೆಯೇ ಓಡಾಡುತ್ತಿತ್ತು.

ಗುರುಕಿರಣ್, ಸ್ವಂತ ವ್ಯವಹಾರ ಮಾಡುತ್ತಿರುವ ಎಲಿಜಿಬಲ್ ಬ್ಯಾಚಲರ್. ಒಬ್ಬನೇ ಮಗ. ವಿದ್ಯಾವಂತ. ಮನೆಕಡೆ ಬಹಳ

ಅನುಕೂಲವಂತರು. ಸೌಂದರ್ಯಳ ಅಕ್ಕನನ್ನು ಮದುವೆಯಾಗುತ್ತಿರುವ ಹುಡುಗನ ಗೆಳೆಯ. ಮನೆಯಲ್ಲಿ ಮದುವೆಯಾಗೆಂದು ಕೇಳುತ್ತಿದ್ದರೂ, ಈಗಲೇ ಬೇಡಮ್ಮಾ ಎಂದು ರಾಗ ಎಳೆಯುತ್ತಿದ್ದ. ಬಹಳ ಹತ್ತಿರದಿಂದ ಗೆಳೆಯನ ಮದುವೆ ನೋಡುವ ಆಸೆಯಿಂದ ಮದುಮಗನ ಪಕ್ಕದಲ್ಲೇ ಕುಳಿತಿದ್ದ. ಅಲ್ಲೇ ಓಡಾಡುತ್ತಿದ್ದ ಸೌಂದರ್ಯಳ ರೂಪ, ಈ ಕಲಿಯುಗದ ವಿಶ್ವಾಮಿತ್ರನ ತಪಸ್ಸು ಭಂಗ ಮಾಡಿ, ತನ್ನ ತಾಯಿಗೆ ಸೌಂದರ್ಯಳ ಬಗ್ಗೆ ತಿಳಿದುಕೊಳ್ಳಲು ತಿಳಿಸಿದಾಗ, ಆತನ ತಾಯಿ ಶಾರದೆಗೆ ಬಹಳ ಖುಷಿಯಾಯ್ತು.

ಅಕ್ಕನ ಮದುವೆ ಮುಗಿಯುವಷ್ಟರಲ್ಲಿ, ಆ ಮದುವೆ ನಡೆಸಿಕೊಡುತ್ತಿದ್ದ ಪುರೋಹಿತರೇ ಇವರಿಬ್ಬರ ಜಾತಕ ನೋಡಿ, ಇಬ್ಬರ ಜಾತಕವೂ ತುಂಬಾ ಚೆನ್ನಾಗಿ ಹೊಂದುತ್ತದೆಂದು ಹೇಳಿ, ಮಾತುಕತೆಯ ತನಕ ಬಂದು ನಿಂತಿತು.

ಮದುವೆ ಆಗು ಎಂದರೇ ರಾಗ ಎಳೆಯುತ್ತಿದ್ದ ಗುರುಕಿರಣ್ ಸೌಂದರ್ಯಳನ್ನು ನೋಡಿದ ಕ್ಷಣದಿಂದ, ಅವಳ ಗುಂಗಲ್ಲೇ ಮುಳುಗಿಹೋದ. ಋಣಾನುಬಂಧ ಅಂದರೆ ಇದೇ ಇರಬಹುದು. ಅವನ ಚಡಪಡಿಕೆ ನೋಡಿದ ಅವನ ಮನೆಯವರು, ಬೇಗ ಮದುವೆಯ ಮುಹೂರ್ತ ನಿಗದಿಪಡಿಸಲು ಸೌಂದರ್ಯ ತಂದೆಗೆ ದುಂಬಾಲು ಬಿದ್ದರು. ಆದರೆ ಮೊದಲ ಮಗಳ ಮದುವೆ ಈಗ ತಾನೆ ಮುಗಿಸಿದ್ದ ಸೌಂದರ್ಯಳ ಅಪ್ಪ , ಈಗ ತಕ್ಷಣ ಆಗುವುದಿಲ್ಲವೆಂದು ಒಂದು ವರ್ಷ ಸಮಯ ನೀಡಲು ಕೇಳಿಕೊಂಡರು. ಗುರುಕಿರಣ್ ಮನೆಯವರು, ಎರಡೂ ಖರ್ಚು ತಾವೇ ಹಾಕಿಕೊಂಡು ಮದುವೆ ಮಾಡಿಕೊಳ್ಳುವುದಾಗಿ, ಮಗಳನ್ನು ಕೊಟ್ಟರೆ ಸಾಕೆಂದು ಹೇಳಿದ್ದರಿಂದ, ಅಕ್ಕನ ಮದುವೆಯಾದ ಆರು ತಿಂಗಳಿಗೆ ಸೌಂದರ್ಯ ಗುರುಕಿರಣ್ ಮನದ ರಾಣಿಯಾಗಿ ಮನೆ ತುಂಬಿದಳು. ಸೌಂದರ್ಯಳ ಅಪ್ಪನೂ ಸ್ವಲ್ಪ ಕಷ್ಟವಾದರೂ, ಅರ್ಧ ಖರ್ಚು ತಾವೂ ಹಾಕಿದರು. ಗುರುಕಿರಣ್ ಮತ್ತು ಸೌಂದರ್ಯ ಒಬ್ಬರ ಪ್ರೀತಿಯಲ್ಲಿ ಒಬ್ಬರು ಮುಳುಗಿ ಪ್ರಪಂಚವನ್ನೇ ಮರೆತರು. ಸೌಂದರ್ಯಳದ್ದು ಹೊಸ ಕೆಲಸವಾಗಿದ್ದರಿಂದ ಮತ್ತು ಅಕ್ಕನ ಮದುವೆಗೂ ಹತ್ತು ದಿನಗಳ ರಜೆ ಹಾಕಿಬಿಟ್ಟಿದ್ದರಿಂದ ಬಹಳ ದಿನ ರಜೆ ಸಿಗದೆ ಮಧುಚಂದ್ರಕ್ಕೆ ಹೋಗಲಾಗದಿದ್ದರೂ, ಪ್ರತಿ ಭಾನುವಾರ ಅವರು ಸುತ್ತದ ಜಾಗವಿಲ್ಲ.

ಹೀಗೇ ಎರಡು ವರ್ಷ ಕಳೆದಾಗ, ಗುರುಕಿರಣ್ ಅಮ್ಮ ಮೊಮ್ಮಗುವಿನ ಮಾತೆತ್ತಿದರು. ಇವರಿಗೂ ಹೌದಲ್ಲವಾ, ಇನ್ನು ನಮ್ಮ ಕುಟುಂಬ ಬೆಳೆಸೋಣ ಎಂದುಕೊಂಡರು. ಮತ್ತೆ ಒಂದು ವರ್ಷ ಕಳೆದರೂ, ಮಗು ಬರುವ ಯಾವ ಸೂಚನೆಯೂ ಇಲ್ಲದಾದಾಗ ಸೌಂದರ್ಯ ಕಳವಳಕ್ಕೀಡಾದಳು.

ಶಾರದೆಯ ಸಲಹೆಯಂತೆ, ಇಬ್ಬರೂ ವೈದ್ಯಕೀಯ ಪರೀಕ್ಷೆಗೆ ಒಳಪಟ್ಟು, ಏನೂ ತೊಂದರೆ ಇಲ್ಲಾ ಎಂದು ವೈದ್ಯರು ಹೇಳಿದರೂ ಮತ್ತಾರು ತಿಂಗಳಾದರೂ ಏನೂ ಒಳ್ಳೆಯ ಸುದ್ದಿ ಸಿಗದಾದಾಗ, ಯೋಚನೆ ಮತ್ತಷ್ಟು ಜಾಸ್ತಿಯಾಯಿತು.

ಹೀಗೆ ದಿನಗಳು ಕಳೆದು ವಿಧಿಯಿಲ್ಲದೆ ಮತ್ತೆ ವೈದ್ಯಕೀಯ ಚಿಕಿತ್ಸೆಗೆ ಒಳಪಟ್ಟ ಸೌಂದರ್ಯ ಗರ್ಭಿಣಿಯಾದಳು. ತಂದೆ ಮನೆ, ಅತ್ತೆ ಮನೆ ಎರಡೂ ಮನೆಗಳಲ್ಲಿ ಸಂಭ್ರಮವೋ ಸಂಭ್ರಮ. ಶಾರದಾರಂತೂ ಸೊಸೆಯ ಬಯಕೆ ತೀರಿಸಲು ತುದಿಗಾಲಲ್ಲಿ ನಿಂತಿರುತ್ತಿದ್ದರು. ಇನ್ನು ಗುರುಕಿರಣ್ ಕೇಳುವುದೇ ಬೇಡ. ಅವಳ ಮನದಾಸೆ ತುಟಿಯ ಮೇಲೆ ಬರುವುದಕ್ಕೂ ಮುಂಚೆಯೇ ಅವಳೆಲ್ಲಾ ಆಸೆಯನ್ನೂ ಈಡೇರಿಸುತ್ತಿದ್ದ. ಹೀಗೇ ದಿನಗಳು ಕಳೆದು, ತಿಂಗಳುರುಳಿ, ಸೀಮಂತವೂ ಸಂಭ್ರಮದಿಂದಲೇ ನಡೆಯಿತು. ಎಂಟನೆಯ ತಿಂಗಳಿಗೆ ಬಿದ್ದು ಸ್ವಲ್ಪ ದಿನಗಳೇ ಕಳೆದಿತ್ತೇನೋ... ಅಂದು ಸೌಂದರ್ಯಳೇಕೋ ಬಹಳ ಸಪ್ಪಗಿದ್ದಳು. ಶಾರದೆ ಏಕೆಂದು ಕೇಳಿದಾಗ ಏಕೋ ಒಂಥರಾ ಆಗುತ್ತಿದೆ. ಏನೆಂದು ತಿಳಿಯುತ್ತಿಲ್ಲಾ ಎಂದವಳನ್ನು ಡಾಕ್ಟರ್ ಬಳಿಗೆ ಕರೆದೊಯ್ದಾಗ, ತಕ್ಷಣ ಅಡ್ಮಿಟ್ ಮಾಡಿಕೊಂಡು ಚಿಕಿತ್ಸೆ ಕೊಟ್ಟರೂ, ಮಗು ಹೊಟ್ಟೆಯಲ್ಲೇ ಸತ್ತು ಹೋಗಿದೆಯೆಂಬ ವಿಷಯ ಮತ್ತು ಸೌಂದರ್ಯ ಮತ್ತೆ ತಾಯಿಯಾಗಲು ಸಾಧ್ಯವಿಲ್ಲ ಎಂಬ ವಿಷಯ ಅರಗಿಸಿಕೊಳ್ಳಲು ಯಾರಿಗೂ ಸಾಧ್ಯವಾಗಲೇ ಇಲ್ಲ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬ ಪರಿಸ್ಥಿತಿ ಆಯಿತು ಸೌಂದರ್ಯ ಮತ್ತು ಗುರುಕಿರಣ್ ಅವರದ್ದು.

ಇದೇ ಕೊರಗಿನಲ್ಲಿ ಸೌಂದರ್ಯಳ ಆರೋಗ್ಯ ಹದಗೆಡುತ್ತಾ ಹೋದಾಗ, ಅವರ ಕುಟುಂಬ ಸ್ನೇಹಿತರೂ ಆಗಿದ್ದ ವೈದ್ಯರು ಕೊಟ್ಟ ಸಲಹೆ ಮಗುವನ್ನು ದತ್ತು ಪಡೆಯುವುದು.

ಗುರುಕಿರಣ್ ಬಹಳ ಆಲೋಚನೆ ಮಾಡಿ, ಈ ವಿಷಯವನ್ನು ಸೌಂದರ್ಯಳ ಬಳಿ ಸಮಯ ನೋಡಿಕೊಂಡು, ಅವಳಿಗೆ ಬೇಸರವಾಗದ ರೀತಿ ಹೇಳಿ, ನಿನಗಿಷ್ಟ ಇದ್ದರೆ ಮಾತ್ರ ಎಂದೂ ಹೇಳಿದ. ಅವನ ಮಾತು ಕಿವಿಯ ಮೇಲೆ ಬೀಳುತ್ತಿದ್ದ ಹಾಗೇ ಅವಳ ಕಣ್ಣಲ್ಲಿ ಉಂಟಾದ ಹೊಳಪು ಅವಳ ಒಪ್ಪಿಗೆಯನ್ನು ಸೂಚಿಸಿತ್ತು.

ಮನೆಯವರೆಲ್ಲಾ ಸಮಾಲೋಚಿಸಿ, ಸಂಬಂಧಗಳಲ್ಲಿರುವ, ತಂದೆ ತಾಯಿ ಇರುವ ಮಗುವನ್ನು ದತ್ತು ಪಡೆಯುವ ಬದಲು, ನಿಜವಾಗಲೂ ಅನಾಥವಾಗಿರುವ ಗಂಡು ಮಗುವನ್ನೇ ಕಾನೂನು ರೀತಿಯಲ್ಲಿ ದತ್ತು ಪಡೆಯಲು ತೀರ್ಮಾನಿಸಿದರು. ಅವರು ಅರ್ಜಿ ಹಾಕಿದ ಆರೇಳು ತಿಂಗಳಿಗೆ ಅವರ ಮನ ಸೂರೆಗೊಂಡ, ಹುಟ್ಟಿ ಒಂದು ವಾರವಾಗಿದ್ದ ಆ ಗಂಡು ಮಗು ಇವರ ಮನೆ ತುಂಬಿತು. ಸೌಂದರ್ಯ ತನಗೇ ಮಗುವಾದರೆ ಹೇಗೋ ಹಾಗೆ ಮತ್ತೆ ಒಂಬತ್ತು ತಿಂಗಳು ವೇತನರಹಿತ ರಜೆ ಪಡೆದು ಆ ಮಗುವಿನ ಆರೈಕೆ ಮಾಡಿದಳು. ಇವರೆಲ್ಲಾ ಆಕಾಂಕ್ಷೆ ಹೊತ್ತ ಆ ಮಗುವಿಗೆ ಮನೋಹರ್ ಎಂದು ನಾಮಕರಣವನ್ನು ಅದ್ಧೂರಿಯಾಗಿ ಮಾಡಿದರು. ಒಂಬತ್ತು ತಿಂಗಳು ಕಳೆದ ಮೇಲೆ ಸೌಂದರ್ಯ ಮನಸ್ಸಿಲ್ಲದ ಮನಸ್ಸಿನಿಂದ ಕಚೇರಿಗೆ ಹೋಗಲಾರಂಭಿಸಿದಳು. ಕೆಲಸ ಮಾಡುವಾಗಲೂ ಅವಳ ಗಮನವೆಲ್ಲಾ ಅವಳ ಮುದ್ದಿನ ಮನುವಿನ ಕಡೆಯೇ. ಅವನಿಗೆ ಸ್ವಲ್ಪ ಹುಶಾರಿಲ್ಲ ಅಂದರೂ, ಮನೆಯಲ್ಲಿ ಅತ್ತೆ ಶಾರದೆ, ನಾನು ನೋಡಿಕೊಳ್ಳುತ್ತೇನೆಂದು ಹೇಳಿದರೂ ಮನಸ್ಸು ಸಮಾಧಾನವಿರದೆ ಅವನನ್ನು ರಜೆ ಹಾಕಿ ನೋಡಿಕೊಳ್ಳುತ್ತಿದ್ದಳು.

ಒಟ್ಟಿನಲ್ಲಿ ಮನೋಹರ್, ಮನು ಎಲ್ಲರ ಮುದ್ದಿನ ಕೂಸಾಗಿ ಅಂಬೆಗಾಲಿಟ್ಟು, ತಪ್ಪು ತಪ್ಪು ಹೆಜ್ಜೆಯಿಟ್ಟು, ತೊದಲು ಮಾತಾಡಿ, ಶಾಲೆಗೆ ಹೋಗುವಷ್ಟು ದೊಡ್ಡವನಾಗೇ ಬಿಟ್ಟ. ಪ್ರತಿಷ್ಠಿತ ಶಾಲೆಗೆ ಸೇರಿಸಿದರು ಗುರುಕಿರಣ್ ಮತ್ತು ಸೌಂದರ್ಯ. ಅವನು ಒಳ್ಳೆಯ ವಿದ್ಯಾವಂತನಾಗಬೇಕು, ಅವನ ಜೀವನ ಸುಖವಾಗಿರಬೇಕು ಎಂದು ಮನೆಯ ಎಲ್ಲರ ಆಸೆಯಾಗಿತ್ತು.

ಆದರೆ ವರ್ಷಗಳು ಉರುಳಿದಂತೆ, ಮನುವಿನ ಗುಣದಲ್ಲೂ ಬೇಡದ ಬದಲಾವಣೆಗಳಾದವು. ಏನು ಕಾರಣವೋ ಏನೋ ನಾಲಕೈದನೆ ತರಗತಿಗೆ ಬರುವಷ್ಟರಲ್ಲಿ ಹಟಮಾರಿಯಾಗಿ ಮೊಂಡಾಗಿ ಬದಲಾದ. ಅವನ ಕೋಪ ಮೂಗಿನ ತುದಿಯಲ್ಲಲ್ಲಾ... ಮೂಗಿನ ತುದಿಗಿಂತ ಒಂದು ಚೂರು ಮುಂದೆಯೇ ಇರುತ್ತಿತ್ತು. ಸೌಂದರ್ಯ ಒಳ್ಳೆಯ ಮಾತಲ್ಲಿ ಹೇಳಿದಳು, ಬೈದು ಹೇಳಿದಳು ಕೊನೆಗೆ ಎರಡೇಟು ಕೊಟ್ಟೂ ತಿಳಿಹೇಳಿದಳು. ಆದರೂ ಯಾವ ಪ್ರಯೋಜನವೂ ಆಗಲಿಲ್ಲ. ಕೋಪ ಬಂದಾಗ ರಾಕ್ಷಸನಂತಾಗುತ್ತಿದ್ದ ಮನು ಮಿಕ್ಕೆಲ್ಲಾ ಸಮಯದಲ್ಲಿ ಬಹಳ ಒಳ್ಳೆಯ ಹುಡುಗನೇ. ಬೆಳೆಯುತ್ತಾ ಸರಿಹೋಗುತ್ತಾನೆಂದು ಗಂಡಹೆಂಡತಿ ಒಬ್ಬರಿಗೊಬ್ಬರು ಸಮಾಧಾನ ಮಾಡಿಕೊಳ್ಳುತ್ತಿದ್ದರು.

ಮನು ಎಂಟನೇ ತರಗತಿಗೆ ಬಂದಾಗ, ಅವನು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗ ಅಲ್ಲ ಎಂಬ ವಿಷಯವನ್ನು ಸೌಂದರ್ಯ ಮತ್ತು ಗುರುಕಿರಣ್ ಅವನ ಮನಸ್ಸಿಗೆ ಆಘಾತವಾಗದ ರೀತಿ ತಿಳಿಸಿದರು. ಬೇರೆಯವರು ಹೇಳಿದರೆ ಅದರ ಪರಿಣಾಮ ಅವನ ಮೇಲೆ ಬಹಳ ಕಠೋರವಾಗಿರುತ್ತದೆಂದು ತಾವೇ ಹೇಳಿದರು. ಒಂದೆರಡು ದಿನ ಸಪ್ಪಗಿದ್ದ ಮನು ಮತ್ತೆ ಮಾಮೂಲಿನಂತೆ ಇರತೊಡಗಿದ. ಆದರೆ ಅವನ ಸ್ವಭಾವವೇನೂ ಬದಲಾಗಲಿಲ್ಲ. ಸೌಂದರ್ಯ ಮನೆಯಲ್ಲಿ ಅವನಿಗಿಷ್ಟವಾದ ಎಲ್ಲಾ ತಿಂಡಿಗಳನ್ನು ಮಾಡಿಕೊಟ್ಟರೂ ದಿನಾ ಆಚೆ ಕಡೆ ಹೋಟೆಲಿನಲ್ಲಿನ ತಿಂಡಿ, ಚಾಟ್ಸ್ ಬೇಕೇಬೇಕು ಮನುವಿಗೆ. ಅವನು ಕೇಳಿದ್ದೆಲ್ಲಾ ಕೊಡಿಸಲೇಬೇಕು, ಇಲ್ಲವೆಂದರೆ ಮನೆಯಲ್ಲಿ ಸಿಕ್ಕಾಪಟ್ಟೆ ಜಗಳ ಮಾಡಿ ಮೂರು ನಾಲಕ್ಕು ದಿನ ಮನೆಯಲ್ಲಿ ಊಟ ಮಾಡುವುದನ್ನೇ ಬಿಟ್ಟುಬಿಡುತ್ತಿದ್ದ. ಓದಿನಲ್ಲೂ ಬಹಳ ಮುಂದಿರದೆ ಶೇಕಡಾವಾರು ಅಂಕಗಳಲ್ಲಿ ಪರವಾಗಿಲ್ಲ ಎನಿಸುವಷ್ಟೇ. ಒಮ್ಮೊಮ್ಮೆ ಭುಗಿಲೆದ್ದ ಕೋಪ ಎಷ್ಟು ಮಿತಿಮೀರುತ್ತಿತ್ತೆಂದರೆ ತಾ ಬೀಸಿದ ಕೈ ತನ್ನ ತಾಯಿಯ ಕಿವಿಗೋ, ಹಣೆಗೋ ಪೆಟ್ಟು ಮಾಡುತ್ತದೆಯೆಂದು, ತನ್ನ ತಾಯಿಯ ಮೇಲೆ ಕೈ ಮಾಡಬಾರದೆಂಬುದನ್ನೂ ಮರೆತೇಬಿಡುತ್ತಿದ್ದ. ನಂತರ ಎಂದಿನಂತೆ ಮಾಮೂಲಾಗಿ ಪ್ರೀತಿಯ ಮಾತನಾಡಿ ಸಾರಿ ಅಮ್ಮಾ ಎನ್ನುತ್ತಿದ್ದ. ಸೌಂದರ್ಯ ಇದಾವುದನ್ನೂ ತನ್ನ ತವರು ಮನೆಯಲ್ಲಿ ಹೇಳದೆ, ಅವನ ಮರ್ಯಾದೆ ಕಾಪಾಡುತ್ತಿದ್ದಳು. ಆದರೆ ಶಾರದೆ ಮತ್ತು ಗುರುಕಿರಣ್ ಮಾತ್ರ ಒಳಗೊಳಗೇ ಕೊರಗುತ್ತಿದ್ದರು. ಸೌಂದರ್ಯಳಷ್ಟು ಒಳ್ಳೆಯ ತಾಯಿ ಸಿಕ್ಕರೂ, ನೆಮ್ಮದಿಯಾಗಿ ಜೀವನ ನಡೆಸುವ, ತಾಯಿಗೂ ಸಂತೋಷ ನೀಡಿ ಪುಣ್ಯ ಕಟ್ಟಿಕೊಳ್ಳುವ ಯೋಗ ಮನುವಿಗಿಲ್ಲವಲ್ಲಾ ಎಂದು ಅಂದುಕೊಳ್ಳುತ್ತಿದ್ದರು.

ಸೌಂದರ್ಯಳ ಕಾಳಜಿಯ ಫಲವೋ ಏನೋ, ಹತ್ತನೇ ತರಗತಿಯಲ್ಲಿ 92% ತೆಗೆದು ಪಾಸಾದ ಮನು, ಕಾಮರ್ಸ್ ತೆಗೆದುಕೊಂಡ. ಮೊದಲ ಪಿಯುಸಿಯಲ್ಲಿ ತರಗತಿಗಳಿಗೂ ಸರಿಯಾಗಿ ಹಾಜರಾಗದೆ, ಸೌಂದರ್ಯಳಿಗೆ ತಲೆ ನೋವಾಗೇ ಬೆಳೆದ. ಇಷ್ಟೆಲ್ಲಾ ಆದರೂ ಸೌಂದರ್ಯಳ ಸಹನೆಯ ಕಟ್ಟೆ ಒಡೆಯದೆ ಮಗನೆಂಬ ಮಮಕಾರದಲ್ಲೇ ಕಾಳಜಿಯಿಂದಲೇ ನೋಡಿಕೊಳ್ಳುತ್ತಿದ್ದಳು.

ಮೊದಲ ಪಿಯುಸಿ ಪಾಸಾದರೂ, ತನಗೆ ಸರಿಯಾದ ಅಂಕ ಬಂದಿಲ್ಲ, ತಾನು ಬೇರೆ ಕಾಲೇಜಿನಲ್ಲಿ ಮೊದಲ ಪಿಯುಸಿ ಮತ್ತೆ ಓದುತ್ತೇನೆಂದು ಬೇರೆ ಕಾಲೇಜಿಗೆ ಸೇರಿದ. ಹಾಗೂ ಹೀಗೂ ಪಿಯುಸಿ ಮುಗಿಸಿ ಅವನು ಪದವಿಗೆ ಸೇರಿದ. ಅಷ್ಟರಲ್ಲಿ ಮಗನಿಗೆ ಮುಂದೆ ಅನುಕೂಲವಾಗಲೆಂದು, ಇದ್ದ ಸ್ವಂತ ಮನೆಯ ಮೇಲೆ ಮತ್ತೊಂದು ಮನೆ ಕಟ್ಟಲು ಆರಂಭಿಸಿದರು.

ಬಹಳ ಯೋಚನೆ ಮಾಡುತ್ತಿದ್ದುದರ ಪರಿಣಾಮವೋ, ವಯಸ್ಸಿನ ಪರಿಣಾಮವೋ, ಗುರುಕಿರಣ್ ಗೆ, ಬಿಪಿ, ಶುಗರ್ ಜೊತೆಗೆ ಲಘು ಹೃದಯಾಘಾತವೂ ಆಯಿತು. ಇತ್ತ ಗಂಡನ ಶುಶ್ರೂಷೆ, ಅರ್ಧ ಕಟ್ಟಿದ ಮನೆ ಮುಗಿಸುವ ಜವಾಬ್ದಾರಿ ಎಲ್ಲಾ ಸೌಂದರ್ಯಳ ಮೇಲೆ ಬಿದ್ದಿತು. ಎಷ್ಟೇ ಕಷ್ಟ ಬಂದರೂ ಎದುರಿಸಿ, ಮನೆ ಕಟ್ಟಿ ಮುಗಿಸಿದಳು, ಅಷ್ಟರಲ್ಲಿ ಗುರುಕಿರಣ್ ಚೇತರಿಸಿಕೊಂಡ.

ಅಪ್ಪ ಅಮ್ಮ ಮಾಡಿದ ಪುಣ್ಯದ ಕೆಲಸಗಳೋ ಏನೋ, ಹಾಗೂ ಹೀಗೂ ಪದವಿ ಮುಗಿಸಿ, ಒಳ್ಳೆಯ ಕೆಲಸವನ್ನೂ ಪಡೆದ ಮನು ಗುಣದಲ್ಲಿ ಮಾತ್ರ ಬದಲಾಗಲೇ ಇಲ್ಲಾ. ಈಗ ಆಸ್ತಿಯನ್ನೆಲ್ಲಾ ತನ್ನ ಹೆಸರಿಗೆ ಮಾಡುವಂತೆ ದುಂಬಾಲು ಬಿದ್ದ. ಇದಕ್ಕೆ ಮಾತ್ರ ಸೌಂದರ್ಯ ಒಪ್ಪಲಿಲ್ಲ. ತಮ್ಮ ನಂತರ ನಿನಗೇ ತಾನೇ, ಈಗ ನಮ್ಮ ಹೆಸರಿನಲ್ಲೇ ಇರುತ್ತದೆ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟಳು. ಈಗ ವಾರಕ್ಕೆ ಮೂರು ನಾಲಕ್ಕು ಬಾರಿ, ಇದೇ ವಿಷಯ ತೆಗೆದು ಜಗಳ ಮಾಡಲಾರಂಭಿಸಿದ.

ಇಷರಲ್ಲಿ ಅವನು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಕೆಲಸಕ್ಕೆ ಸೇರಿದ, ಅನೂಹ್ಯ ಇವನ ಮನ ಗೆದ್ದಳು. ಮನೆಯಲ್ಲಿ ವಿಷಯ ತಿಳಿಸಿದ ಮನು, ತಾನವಳನ್ನೇ ಮದುವೆಯಾಗುವುದಾಗಿ ಹೇಳಿದ. ಸೌಂದರ್ಯ ಮತ್ತು ಗುರುಕಿರಣ್ ಅನೂಹ್ಯಳ ಪೂರ್ವಾಪರಗಳನ್ನು ವಿಚಾರಿಸಿ, ಒಳ್ಳೆಯ ಮನೆತನ, ಒಳ್ಳೆಯ ಹುಡುಗಿ, ಮನುವಿನ ಜೀವನವೂ ಸರಿಹೋಗುತ್ತದೆ ಎಂಬ ಆಶಾಭಾವನೆಯಲ್ಲಿ ಅನೂಹ್ಯಳ ಮನೆಗೆ ಮಾತುಕತೆಗೆ ಹೋದರು. ಅನೂಹ್ಯ ಇವರ ಮನಸ್ಸನ್ನು ಗೆದ್ದುಬಿಟ್ಟಳು. ಸೌಂದರ್ಯಳು ಯಾವ ವಿಷಯವನ್ನೂ ಮುಚ್ಚಿಡದೆ, ಮನುವಿನ ಗುಣಸ್ವಭಾವ, ಅವನು ತಮ್ಮ ದತ್ತು ಪುತ್ರ ಎಲ್ಲದರ ಬಗ್ಗೆಯೂ ಅನೂಹ್ಯಳ ಬಳಿ ಹೇಳಿದಳು. ಅನೂಹ್ಯ, ಅದೆಲ್ಲಾ ಕೇಳಿಯೂ ಮದುವೆಗೆ ಒಪ್ಪಿದಳು.

ಮದುವೆ ವಿಜೃಂಭಣೆಯಿಂದ ಆಗಿ, ಅನೂಹ್ಯ ಮನೆಯ ಸೊಸೆಯಾಗುವ ಬದಲು ಮಗಳಾಗಿ, ಸೌಂದರ್ಯಳ ಬಾಳಿಗೆ ತಂಪನ್ನೀಯುವಂತೆ ಬಂದಳು. ಅತ್ತೆ ,ಮಾವನನ್ನು ತನ್ನ ತಂದೆ ತಾಯಿಯಂತೆ ಜೋಪಾನವಾಗಿ ಕಾಳಜಿಯಿಂದ ನೋಡಿಕೊಳ್ಳಲಾರಂಭಿಸಿದಳು.

ಯಾವ ಜನ್ಮದಲ್ಲಿ ಶತ್ರುವಾಗಿದ್ದನೋ ಈ ಮನು, ಇವರುಗಳ ಅನ್ಯೋನ್ಯತೆ ಅವನಿಗೆ ಹಿಡಿಸಲಿಲ್ಲ. ಏನೋ ನೆಪ ಹೇಳಿ, ಬೇರೆ ಮನೆ ಮಾಡಿಕೊಂಡು, ಅನೂಹ್ಯಳ ಇಚ್ಛೆಗೆ ವಿರುದ್ಧವಾಗಿ ಸಂಸಾರ ಹೂಡಿದ.

ಇದೆಲ್ಲ ಜಂಜಾಟಗಳಿಂದ ಶಾರದೆಯ ಆರೋಗ್ಯ ಏರುಪೇರಾಗಿ ಇಹಲೋಕ ತ್ಯಜಿಸಿದರು. ಒಂದು ಕಡೆ ಮಗನೇ ಬೇರೆ ಮನೆ ಮಾಡಿ, ಹೊಂದಿಕೊಂಡಿದ್ದ ಸೊಸೆಯನ್ನು ದೂರಮಾಡಿದ್ದು, ತಾಯಿಯಂತೆ ತನಗೆ ಪ್ರೀತಿ ತೋರುತ್ತಿದ್ದ ಅತ್ತೆ ಶಾರದೆಯ ಅಗಲಿಕೆ ಸೌಂದರ್ಯಳ ಆರೋಗ್ಯದ ಮೇಲೂ ಪರಿಣಾಮ ಬೀರುತಿತ್ತು.

ಸಧ್ಯ, ಮನು ತಂದೆ ತಾಯಿಯ ಬಳಿ ಒರಟನಾಗಿದ್ದರೂ, ಹೆಂಡತಿಗೆ ಒಳ್ಳೆಯ ಗಂಡನಾಗಿದ್ದ. ಮನು, ಅನೂಹ್ಯ ಇಬ್ಬರದೂ ಅನ್ಯೋನ್ಯ ದಾಂಪತ್ಯವಾಗಿತ್ತು. ಆದರೆ ತಂದೆ ತಾಯಿಯನ್ನು ನೋಡಲು ಬರುವುದನ್ನೇ ಬಿಟ್ಟ. ಅನೂಹ್ಯ ಮಾತ್ರ ಅವನಿಗೆ ತಿಳಿಯದಂತೆ ಅತ್ತೆ ಮಾವನವರನ್ನು ವಾರಕ್ಕೊಮ್ಮೆ ಭೇಟಿಯಾಗಿ ಅವರ ಆರೋಗ್ಯ ವಿಚಾರಿಸಿ, ಎಲ್ಲಾ ಸರಿ ಹೋಗುತ್ತದೆ ಎಂಬ ಭರವಸೆಯ ಮಾತಾಡಿ ಹೋಗುತ್ತಿದ್ದಳು. ಮನುವಿಗೆ ಮದುವೆಯಾಗಿ , ಎರಡು ವರ್ಷವಾದರೂ ಮಕ್ಕಳಾಗಲಿಲ್ಲ. ಅನೂಹ್ಯಳ ಕೊರಗು ನೋಡಲಾಗದೆ ಇಬ್ಬರೂ ವೈದ್ಯಕೀಯ ಪರೀಕ್ಷೆಗೆ ಒಳಪಟ್ಟರೆ, ಆಘಾತಕಾರಿ ವಿಷಯ ತಿಳಿಯಿತು. ಅನೂಹ್ಯ ತಾಯಿಯಾಗಲು

ಎಲ್ಲಾ ಅರ್ಹತೆಗಳಿದ್ದರೂ, ಮನುವಿನಲ್ಲೇ ದೋಷವಿತ್ತು. ಮನು ಮಾನಸಿಕವಾಗಿ ಕುಗ್ಗಿ ಹೋದ. ಆದರೆ ಅನೂಹ್ಯಳೇ, ಯೋಚಿಸಬೇಡಿ, ನಿಮ್ಮ ತಂದೆ ತಾಯಿಯಂತೆ ನಾವೂ ಒಂದು ಮಗುವನ್ನು ದತ್ತು ಪಡೆಯೋಣ ಎಂದು ಧೈರ್ಯವಾಗಿ ಹೇಳಿದಳು.

ಏಕೋ ಮನುವಿಗೆ ಪಾಪ ಪ್ರಜ್ಞೆ ಕಾಡತೊಡಗಿತು. ಆದರೆ ಅದನ್ನು ತೋರಿಸಿಕೊಂಡು ಕ್ಷಮೆ ಕೇಳುವಷ್ಟು ದೊಡ್ಡಮನಸ್ಸು ಅವನಿಗಿನ್ನೂ ಬಂದಿರಲಿಲ್ಲ. ದತ್ತು ವಿಷಯ ತಿಳಿದ ಸೌಂದರ್ಯ, ಗುರುಕಿರಣ್ ಖುಷಿಯಾಗಿ ಅನೂಹ್ಯಳನ್ನು ಆಶೀರ್ವದಿಸಿ, ಹುರಿದುಂಬಿಸಿದರು.

ಈಗ ಮತ್ತೆ ಅದೇ ಪುನರಾವರ್ತನೆಯಾಯಿತು. ಗಂಡು ಮಗುವೊಂದು ಮನು ಅನೂಹ್ಯರ ಬಾಳಿಗೆ ಪ್ರವೇಶಿಸಿತು. ಆ ಮಗುವಿನ ಆಟ ಪಾಠ ನೋಡನೋಡುತ್ತಾ, ಮನುವಿಗೆ ತನ್ನ ಬಾಲ್ಯದ ನೆನಪಾಗತೊಡಗಿತ್ತು. ದತ್ತು ಪಡೆದ ವಿಷಯ ತಿಳಿದ ಗೆಳೆಯರು, ಒಳ್ಳೆಯದು ಮಾಡಿದಿರಿ, ಪಾಪ ಒಂದು ಮಗುವಿಗೆ ಜೀವನ ಕೊಟ್ಟಿರಿ ಎಂದೆಲ್ಲಾ ಹೇಳುವಾಗ ತಾಯಿಯ ನೆನಪಾಗತೊಡಗಿತು. ಆದರೂ ಸೋಲೊಪ್ಪಿಕೊಳ್ಳಲು ತಯಾರಿರಲಿಲ್ಲ ಮನು. ಅನೂಹ್ಯ ಆ ಮಗುವನ್ನು ಬೆಳೆಸಲು ತೆಗೆದುಕೊಳ್ಳುವ ಕಾಳಜಿ ಅವನಿಗೆ ಅವನಮ್ಮನನ್ನು ನೆನಪಿಸತೊಡಗಿತು. ಮನುವಿನ ಮಗುವಿಗೆ ಆಕಾಶ್ ಎಂಬ ಹೆಸರಿಟ್ಟರು. ಅನೂಹ್ಯ ಈಗ ಮಾತ್ರ ಮನುವಿಗೆ ಹೇಳಿ, ಮಗುವನ್ನು ಕರೆದುಕೊಂಡು ಅತ್ತೆ ಮನೆಗೆ ಬರಲಾರಂಭಿಸಿದಳು. ಸೌಂದರ್ಯ, ಗುರುಕಿರಣ್ ಗೆ ಮೊಮ್ಮಗನನ್ನು ಎಷ್ಟು ಆಡಿಸಿದರೂ ಸಾಲದು.

ದಿನಗಳು ಉರುಳಿದಂತೆ ಆಕಾಶ್ ಪ್ರೌಢಶಾಲೆಗೆ ಬಂದ. ಒಳ್ಳೆಯ ಹುಡುಗನಾಗಿ ಬೆಳೆದುಕೊಂಡು ಬಂದ ಆಕಾಶ್, ತಂದೆ ತಾಯಿಯನ್ನು ಬಹಳ ಪ್ರೀತಿ ಗೌರವದಿಂದ ಕಾಣುತ್ತಿದ್ದ. ನಯವಾದ, ಸವಿನಯ ಸ್ವಭಾವದಿಂದ ಎಲ್ಲರ ಮನಗೆದ್ದಿದ್ದ. ಸೌಂದರ್ಯಳಂತೆಯೇ, ಅನೂಹ್ಯಳೂ ಸಹ ಎಂಟನೆಯ ತರಗತಿ ಓದುವಾಗ ಆಕಾಶ್ ಗೆ ಅವನ ದತ್ತು ಪಡೆದ ವಿಷಯ ತಿಳಿಸಿದಳು. ಎರಡು ದಿನ ಗರಬಡಿದವನಂತೆ ಇದ್ದ ಆಕಾಶ್, ಮೂರನೆಯ ದಿನ ಬೆಳಿಗ್ಗೆ ಎದ್ದ ತಕ್ಷಣ ಅಪ್ಪ ಅಮ್ಮನ ಕಾಲಿಗೆ ಬಿದ್ದು ತನಗೊಂದು ಒಳ್ಳೆಯ ಜೀವನ ಕೊಟ್ಟಿದ್ದಕ್ಕೆ ಧನ್ಯವಾದ ತಿಳಿಸಿದ. ಆಕಾಶನ ವರ್ತನೆ ಮನುವಿನ ಕಪಾಳಕ್ಕೆ ಯಾರೋ ಹೊಡೆದಂತೆ ಆಯಿತು. ಇಷ್ಟು ಚಿಕ್ಕ ವಯಸ್ಸಿಗೆ ಎಂತಹ ಪ್ರಬುದ್ಧತೆ ತನ್ನ ಮಗನಿಗೆ. ಎಷ್ಟು ಒಳ್ಳೆಯ ಹುಡುಗ. ತನಗೂ ಅವನಿಗೂ ಎಷ್ಟು ಆಜ ಗಜಾಂತರ. ತಾನಿಷ್ಟು ದೊಡ್ಡವನಾದರೂ, ತನ್ನ ಅಹಂಕಾರ ಬಿಡದೆ, ಅಮ್ಮ ಅಪ್ಪನಿಗೆ ಇನ್ನೂ ನೋವನ್ನು ಕೊಡುತ್ತಲೇ ಇದ್ದೇನಲ್ಲಾ... ನನಗೂ ಅಷ್ಟೇ, ಅವರು ಎಷ್ಟು ಒಳ್ಳೆಯ ಜೀವನ ಕೊಟ್ಟರು. ನಾನು ಅವರಿಗೆ ನೋವಲ್ಲದೆ ಬೇರೆ ಏನು ನೀಡಿದೆ. ಪಶ್ಚಾತ್ತಾಪದ ಕಣ್ಣೀರು ಅವನ ಕೆನ್ನೆಯ ಮೇಲೆ ಇಳಿಯುತ್ತಲೇ ಇತ್ತು.

ಅಪ್ಪಾ.... ಅಪ್ಪಾ... ಏನಾಯ್ತಪ್ಪಾ.... ಎನ್ನುವ ಆಕಾಶನ ಮಾತಿನಿಂದ ಎಚ್ಚೆತ್ತುಕೊಂಡ ಮನು, ಅನೂಹ್ಯಳಿಗೆ, ಅಪ್ಪ, ಅಮ್ಮನನ್ನು ನೋಡಿ ಬರೋಣ ನಡೆ ಎಂದ. ಇವನ ಮಾತನ್ನು ಆಶ್ಚರ್ಯದಿಂದ ಕೇಳಿದ ಅನೂಹ್ಯಳನ್ನು ಎಚ್ಚರಿಸಿದ್ದು ಅವಳ ಮೊಬೈಲ್ ಕರೆ. ಕರೆ ಎತ್ತಿದವಳು ಗಾಬರಿಯಾಗಿ, ಏನಾಯ್ತು ಮಾವಾ... ಎಂದು ಕುಸಿದು ಕೂತಳು. ಅವಳ ಮೊಬೈಲನ್ನು ಕೈಗೆ ತೆಗೆದುಕೊಂಡ ಮನುವಿಗೆ ಕೇಳಿಸಿದ್ದು, ತನ್ನಪ್ಪನದ್ದೇ ಅಳುವ ಧ್ವನಿ. ಅನೂಹ್ಯ, ನಿಮ್ಮತ್ತೆ ನಮ್ಮನ್ನೆಲ್ಲಾ ಬಿಟ್ಟು ಹೋದಳಮ್ಮಾ... ಕೊನೆಯಲ್ಲೂ ಮನುವಿನ ಬಗ್ಗೆಯೇ ಕೇಳಿದಳು... ಈಗಲಾದರೂ ಅವನನ್ನು ಕರೆದುಕೊಂಡು ಬಾ... ಅವಳ ಆತ್ಮಕ್ಕಾದರೂ ಶಾಂತಿ ಸಿಕ್ಕಲಿ... ಎಂಬ ಮಾತುಗಳು.

ಅಮ್ಮಾ.... ಅಮ್ಮಾ.... ಎಂದು ಚೀರಿ ಎದ್ದ ಮನುವನ್ನು ಅನೂಹ್ಯಳೇ ಸಮಾಧಾನಿಸಿದಳು. ರಾತ್ರಿ ಮಾವನ ಕರೆ ಬಂದಾಗ , ತನ್ನ ಕೈಗೆ ಮೊಬೈಲನ್ನು ಕೊಟ್ಟು ಬಂದು ಮಲಗಿದ ಮನುವಿಗೆ ಏನಾಯ್ತು ಎಂದು ಅನೂಹ್ಯ ಕೇಳಿದಾಗ, ತಾನು ಕಂಡಿದ್ದು ಕೆಟ್ಟ ಕನಸು, ತನ್ನ ಆಕಾಶನ ಒಳ್ಳೆಯ ಗುಣ ಕಂಡು ಅಮ್ಮನನ್ನು ಕಂಡು ಕ್ಷಮೆ ಕೇಳಬೇಕು, ಅವಳ ಮಡಿಲಲ್ಲಿ ಮಲಗಿ ತಲೆ ಸವರಿಸಿಕೊಳ್ಳಬೇಕು ಎಂದು ಯೋಚಿಸುತ್ತಾ ಅದೇ ಚಿಂತೆಯಲ್ಲಿ ಮಲಗಿದವನಿಗೆ ಬಹಳ ಕೆಟ್ಟ ಕನಸು ಬಿತ್ತೆಂದು ಹೇಳಿದ ಮನು, ಯಾವಾಗ ಬೆಳಗಾಗುವುದೋ, ಯಾವಾಗ ಅಮ್ಮನನ್ನು ಕಂಡು ಕ್ಷಮೆ ಕೇಳುವೆನೋ ಎಂದು ಚಡಪಡಿಸತೊಡಗಿದ....

ಸಂಶೋಧನೆಯಲ್ಲಿ ಮುಂಬೈ ಕನ್ನಡಿಗರ ಹೆಜ್ಜೆ ಗುರುತು

